ಅಧ್ಯಕ್ಷರು : ಈ ವಿಷಯವನ್ನು ಅವರು ಮೊನ್ನೆ ಕೊಟ್ಟಿದ್ದರು. ಇದು ಆದ ಕೂಡಲೇ ಅದೇ ವಿಷಯ ಬರುತ್ತದೆ.

3. ನಿಯಮ 69ರ ಮೇರೆಗೆ 4 ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ

ಅಲ್ಪ ಕಾಲಾವಧಿ ಚರ್ಚೆ

1. ವಿಷಯ : ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ತೀವ್ರತೊಂದರೆಯಾಗಿರುವ ಬಗ್ಗೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಕಳೆದ ಎರಡು ವರ್ಷಗಳಲ್ಲಿ ಮಳೆಯ ಪ್ರಮಾಣ ಕಡಿಮೆ ಯಾಗಿರುವಂಥ ಹಿನ್ನೆಲೆಯಲ್ಲಿ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಪ್ರತಿಯೋಂದು ಹಳ್ಳಿಗಳಲ್ಲೂ ಕಾಣುತ್ತಿದ್ದೇವೆ. ಇದರ ಜೊತೆಗೆ ಸರ್ಕಾರದ ವರದಿಯ ಪ್ರಕಾರವೇ ಇವತ್ತು ಸುಮಾರು 155 ಹಳ್ಳಿಗಳು ಬರಗಾಲದ ವ್ಯಾಪ್ತಿಯಲ್ಲಿವೆ ಎಂಬ ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಇವತ್ತು ಹೊಸ ಸರ್ಕಾರ ಬಂದ ನಂತರ ಕುಡಿಯುವ ನೀರಿನ ವಿಷಯವಾಗಿ ಮಾನ್ಯ ಮುಖ್ಯಮಂತ್ರಿಯವರು ಡಿ.ಸಿ.ಗಳ ಮತ್ತು ಮುಖ್ಯ ನಿರ್ವಹಣಾಧಿಕಾರಿ, ಜಿಲ್ಲಾಪಂಚಾಯತ್ ಅಧಿಕಾರಿಗಳ ಸಭೇಯನ್ನು ಕರೆದು ಚರ್ಚೆ ಮಾಡಿರುವಂಥದ್ದನ್ನು ನಾನು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಇವತ್ತು ಮುಖ್ಯಮಂತ್ರಿಗಳು ಅಧಿಕಾರಿಗಳ ಸಭೆಯನ್ನು ಕರೆದಾಗ ಹಣದ ಕೊರತೆ ಇಲ್ಲವೆಂದು ಹೇಳುತ್ತಾರೆ. ಆದರೆ ನಾವು ಶಾಸಕರುಗಳು ಅವರ ಭಾಗದ ಕುಡಿಯುವ ನೀರಿನ ಸಮಸ್ಯೆಯನ್ನು ಅಧಿಕಾರಿಗಳ ಗಮನಕ್ಕೆ ತಂದಾಗ, ಅವರು ಹಲವಾರು ಕಾರಣಗಳನ್ನು ಕೊಡುವಂಥದ್ದು ಹಾಗೂ ಚುನಾವಣೆ ಹಿನ್ನೆಲೆಯಲ್ಲಿ ಸುಮಾರು 80–90 ಬೋರ್‌ವೆಲ್‌ಗಳನ್ನು ಕೊರೆಸಿ, ಇವತ್ತು ಹಣ ಬಿಡುಗಡೆಯಾಗದೇ ಇರುವ ಹಿನ್ನೆಲೆಯಲ್ಲಿ ಬೋರ್‌ವೆಲ್ ಕೊರೆಯುವವರು ಮುಂದೆ ಬರದೇ ಇರುವಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ನಾವು ಇವತ್ತು ಪ್ರತಿಯೊಂದು ಕ್ಷೇತ್ರದಲ್ಲಿ ಹಳ್ಳಿಗಳಿಗೆ ಭೇಟಿ ಕೊಟ್ಟಾಗ ಅಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ಕಾಣುತ್ತಿದ್ದೇವೆ. ಈ ಬಗ್ಗೆ ನಾನು ಮಾನ್ಯ ರಾಜ್ಯಪಾಲರ ಭಾಷಣದಲ್ಲೇ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೂ ತಂದಿದ್ದೇನೆ. ಇವತ್ತು ಕೆಲವು ಪತ್ರಿಕೆಗಳಲ್ಲಿ ಈ ವಿಷಯ ಬಂದಿದೆ. ಇವತ್ತು ಬಿತ್ತನೆ ಮಾಡಬೇಕಾಗಿ–

ರುವಂಥ ನಮ್ಮ ರೈತರುಗಳಿಗೆ ಸಹಕಾರಿ ಬ್ಯಾಂಕ್‌ಗಳಲ್ಲಿ ಸಾಲ ಕೊಡುವ ವಿಷಯದಲ್ಲಿ ಮತ್ತು ಕಳೆದ ಸರ್ಕಾರದಲ್ಲಿ ಮತ್ತು ಕಳೆದ ಸರ್ಕಾರದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಒಂದು ಲಕ್ಷ ರೂ.ಗಳ ಸಾಲ ಪಡೆದಿರುವಂಥ ರೈತ ಕುಟುಂಬಗಳಿಗೆ 25,000 ರೂ.ಗಳವರೆಗೆ ಸಾಲ ಮನ್ನಾ ಮಾಡುತ್ತಿದ್ದೇವೆಂದು ಘೋಷಣೆ ಮಾಡಿದ ನಂತರ ಇವತ್ತು ಹಣ ಬಿಡುಹಡೆಯಾಗದೇ, ರೈತರು ಬಿತ್ತನೆ ಬೀಜಗಳನ್ನು ಖರೀದಿ ಮಾಡುವುದಕ್ಕೂ ಸಾಧ್ಯವಾಗದೇ ಇರುವಂಥ ಪರಿಸ್ಥಿತಿ ಇದೆ. ಇಂಥ ಪರಿಸ್ಥಿತಿಯಲ್ಲಿ ಕಳೆದ ಎರಡೂ ವರ್ಷಗಳಿಂದಲೂ ರೈತರು ಸಂಕಷ್ಟದಲ್ಲಿದ್ದಾರೆ ಇವತ್ತು ನಮ್ಮ ರೈತರು ಬಿತ್ತನೆ ಬೀಜ ಮತ್ತು ಗೊಬ್ಬರ ಖರೀದಿ ಮಾಡುವುದಕ್ಕೆ ತಕ್ಷಣ ಸಕಾರ ಸಹಕಾರಿ ಬ್ಯಾಂಕ್‌ಗಳಿಂದ ಹಣವನ್ನು ಬಿಡುಗಡೆ ಮಾಡದೇ ಇರುವಂಥದ್ದು ಮತ್ತು ಕಾವೇರಿ ಗ್ರಾಮೀಣಾ ಬ್ಯಾಂಕ್‌ಗಳಿರಬಹುದು, ಇತರೆ ಬ್ಯಾಂಕ್‌ಗಳಲ್ಲಿ ಸಾಲವನ್ನು ಕೊಡದೇ ಇರುವಂಥ ಪರಿಸ್ಥಿತಿಯಲ್ಲಿ, ಇವತ್ತು ರೈತರು ಖಾಸಗಿ ಬಡ್ಡಿ ವ್ಯಾಪಾರ ಮಾಡುವವರ ಹತ್ತಿರ, ಅವರ ಕುಟುಂಬಗಳ ಹೆಣ್ಣುಮಕ್ಕಳ ಒಡವೆಗಳನ್ನು ಇಟ್ಟು ಹೆಚ್ಚಿನ ಬಡ್ಡಿಗೆ ಹಣವನ್ನು ಪಡೆಯುವಂಥ ಅನಿವಾರ್ಯ ಪರಿಸ್ಥಿತಿಗೆ ರೈತರು ಈಡಾಗಿದ್ದಾರೆ. ಅದರ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದಿಂದ ಆರ್ಥಿಕ ನೆರವು ಕೇಳಿದ್ದು, ಕೇವಲ 200 ಕೋಟಿ ರೂ.ಗಳನ್ನು ಮಾತ್ರ ಕೊಟ್ಟಿದ್ದಾರೆಂದು ಅವರ ಭಾಷಣದಲ್ಲೂ ಹೇಳಿದ್ದಾರೆ. ಬರಗಾಲದ ಹಿನ್ನೆಲೆಯಲ್ಲಿ ಸಮರ್ಪಕವಾಗಿ ಕೆಲಸವನ್ನು ನಿರ್ವಹಿಸುತ್ತೇವೆನ್ನುವ ಮಾತನ್ನು ಹೇಳಿದರು. ಹಲವಾರು ಕಡೆಗಳಲ್ಲಿ ಮೇವಿನ ಕೊರತೆ ಇರುವ ಪ್ರದೇಶಗಳು ಇವೆ. ಕೆಲವು ಭಾಗಗಳಲ್ಲಿ ಮಳೆಯಾಗಿದ್ದರೂ ಈಗಲೂ ನೀರಿನ ವಿಷಯದಲ್ಲಿ ಹಲವಾರು ಹಳ್ಳಿಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರುವಂಥದ್ದು ಏನೆಂದರೆ, ಇವತ್ತು ಯಾವುದೇ ಕಾರಣಕ್ಕೂ ಬೋರ್‌ವೆಲ್‌ಗಳ ವಿಷಯದಲ್ಲಿ ಬೋರ್‌ಗಳನ್ನು ಕೊರೆಯುವವರು ಮುಂದೆ ಬರದೇ ಇರುವಂಥ ಪರಿಸ್ಥಿತಿ ಇವೆ. ಈ ವಿಷಯವಾಗಿ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ತಕ್ಷಣ ಹಣವನ್ನು ಬಿಡುಗಡೆ ಮಾಡಿ, ಇವತ್ತು ಯಾವ ಹಳ್ಳಿಗಳಲ್ಲಿ ಕುಡಿಯುವ ಸಮಸ್ಯೆ ಇದೆ, ಅದಕ್ಕೆ ಶಾಶ್ವತವಾದಂಥ ರೀತಿಯಲ್ಲಿ ಒಂದು ಕಾರ್ಯಕ್ರಮವನ್ನು ತರುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರ

ಗಮನಕ್ಕೆ ತರಬಯಸುತ್ತೇನೆ. ರೈತರಿಗೆ ವಿಶೇಷವಾಗಿ ಬಿತ್ತನೆ ಬೀಜ, ಗೊಬ್ಬರವನ್ನು ಖರೀದಿ ಮಾಡುವುದಕ್ಕೆ ರೈತರು ಕಳೆದ ಎರಡು ವರ್ಷಗಳಿಂದ ಬರಗಾಲದಿಂದ ಸಂಕಷ್ಟದಲ್ಲಿದ್ದಾರೆ. ಇವತ್ತು ಇಲ್ಲಿ ಸಹಕಾರಿ ಸಚಿವರು ಇದ್ದಾರೆ, ಈ ಬಗ್ಗೆ ತಕ್ಷಣಕ್ರಮ ತೆಗೆದುಕೊಳ್ಳಬೇಕು. ಕಳೆದ ಸರ್ಕಾರದ ಘೋಷಣೆಯ ಆದಾರದ ಮೇಲೆ 2,800–2,900 ಕೋಟಿ ರೂ.ಗಳನ್ನು ಬಿಡುಗಡೆಯಾಗಬೇಕಾಗಿದೆ ಈ ಹಣವನ್ನಾದರೂ ತಕ್ಷಣ ಬಿಡುಗಡೆ ಮಾಡಿ, ರೈತರಿಗೆ ಸಾಲವನ್ನು ಕೊಡಬೇಕೆಂದು ಮನವಿ ಮಾಡುತ್ತೇನೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಹಾಗೂ ಮಾನ್ಯ ಸಹಕಾರಿ ಸಚಿವರು ಹೇಳಿರುವಂಥದ್ದನ್ನು ನಾನು ಗಮನಿಸಿದ್ದೇನೆ. ರೈತರಿಗೆ ಸುಮಾರು ಎರಡು ಲಕ್ಷ ರೂ.ಗಳವರೆಗೂ ಬಡ್ಡಿ ರಹಿತ ಸಾಲವನ್ನು ಕೊಡುತ್ತೇವೆಂದು ಏನು ಹೇಳಿದ್ದೀರಿ ಅದನ್ನು ಅನುಷ್ಠಾನಕ್ಕೆ ತರಬೇಕಾದರೆ ತಕ್ಷಣ ಹಳೆಯ ಬಾಕಿ ಸಹಕಾರಿ ಬ್ಯಾಂಕ್‌ಗಳಿಗೆ ಕೊಡಬೇಕಾಗುತ್ತದೆ. ಈ ಹಣ release ಆದರೆ ನಮ್ಮ ರೈತರಿಗೆ ಯಾವುದೇ ತೊಂದರೆ ಇಲ್ಲದೇ ಬಿತ್ತನೆ ಬೀಜ ಮತ್ತು ಗೊಬ್ಬರವನ್ನು ಖರೀದಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ, ತಮ್ಮ ಮುಖಾಂತರ ಸರ್ಕಾರದ ಗಮನ ಸೆಳೆಯುವುದಕ್ಕೆ ಬಯಸುತಿದ್ದೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ 2–3 ಸದಸ್ಯರು ಸಹಿ ಮಾಡಿದ್ದೇವೆ, ಮಾತನಾಡಬಹುದೇ?

ಅಧ್ಯಕ್ಷರು : ಆಯಿತು, ಇನ್ನು ಒಬ್ಬ ಸದಸ್ಯರು ಮಾತನಾಡಿ, ಸಂಕ್ಷಿಪ್ತವಾಗಿ ಹೇಳಿ. ಅವರು ಹೇಳಿದ್ದನ್ನೇ repeat ಮಾಡಬೇಡಿ, ಬೇರೆ ಹೊಸದಾಗಿ ಏನಾದರೂ ಇದ್ದರೆ ಹೇಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ವಿಚಾರದಲ್ಲಿ ಹಿಂದೆ ಶಾಸಕರ ಅಧ್ಯಕ್ಷತೆಯಲ್ಲಿ ಒಂದು Task-force Committee ಇತ್ತು. ಎಲ್ಲಿ ಸಮಸ್ಯೆ ಇದೆ, ಅಲ್ಲಿ ಕಾಮಗಾರಿಗಳನ್ನು ಪ್ರಾರಂಭ ಮಾಡುವುದಕ್ಕೆ ಹಣ ಬಿಡುಗಡೆ ಯಾದಂಥ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ಆ ಒಂದು Task-force Committee ಇತ್ತು. ದಯಾಮಾಡಿ ಅದನ್ನು ಮುಂದುವರೆಸಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಅದು ಈಗಲೂ ಇದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಈಗಲೂ ಇದೆಯೇ? ಆದರೆ ನಮಗೆ ಅಧಿಕಾರಿಗಳು ಅದರ ಬಗ್ಗೆ ಯಾವುದೇ ಮಾಹಿತಿಯನ್ನು ಕೊಡಲಿಲ್ಲ. ಕುಡಿಯುವ ನೀರಿನ ವಿಚಾರದಲ್ಲಿ ಯಾವುದೇ ಸಮಸ್ಯೆಯಿಲ್ಲ ಜಿಲ್ಲಾಧಿಕಾರಿಗಳ ಹತ್ತಿರ ಹಣವಿದೆ ಎಂದು ಮುಖ್ಯಮಂತ್ರಿಗಳು ಹೇಳಿರುವುದನ್ನು ನಾನು ಮಾಧ್ಯಮಗಳಲ್ಲಿ ನೋಡಿದೆ. ಜಿಲ್ಲಾಧಿಕಾರಿಗಳ ಹತ್ತಿರ ಇರುವ ಹಣವನ್ನು ಯಾವುದೇ ಸಂದರ್ಭದಲ್ಲಿ ಬೇಕಾದರೂ ಉಪಯೋಗಿಸಿಕೊಳ್ಳಬಹುದು ಎನ್ನುವ ಮಾತನ್ನು ತಾವು ಹೇಳಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ ಬೋರ್‌ವೆಲ್ ಕೊರೆದಿರುವ ಬಾಕಿ ಹಣ ಸುಮಾರು ನಾಲ್ಕು ಕೋಟಿ ರೂಪಾಯಿಗಳಷ್ಟಿದೆ. ಬೋರ್‌ವೆಲ್ ಕೊರೆದಿರುವುದಕ್ಕೆ ಹಣ ಬಿಡುಗಡೆ ಮಾಡಿಲ್ಲ. ಹೊಸದಾಗಿ ಬೋರ್ ಕೊರೆಯಿರಿ ಎಂದು ಕೇಳಿದರೆ, ಹಳೆಯ ಬಿಲ್‌ನ್ನೇ ಕ್ಲಿಯರ್ ಮಾಡಿಲ್ಲ ಎಂದು ಹೇಳಿ ಅವರ್‍ಯಾರೂ ಬಂದು ಕೊರೆಯುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು : ಅದೆಲ್ಲವನ್ನೂ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅವರು ಇಡೀ ರಾಜ್ಯದ ಬಗ್ಗೆ ಹೇಳಿದ್ದಾರೆ. ನಾನು ನಮ್ಮ ಜಿಲ್ಲೆಯ ಮತ್ತು ತಾಲ್ಲೂಕಿನ ಮಾಹಿತಿಯನ್ನು ಹೇಳುತ್ತಿದ್ದೇನೆ. ನಮ್ಮಲ್ಲಿ ಜಿಲ್ಲಾಧಿಕಾರಿಗಳ ಹತ್ತಿರವೂ ಹಣವಿಲ್ಲ. ಈಗಾಗಲೇ ಕೊರೆದಿರುವ ಬೋರ್‌ವೆಲ್‌ಗಳಿಗೆ ಪಂಪು, ಮೋಟಾರ್ ಹಾಕಲು ಕೇಳಿದರೆ ಜಿಲ್ಲಾಧಿಕಾರಿಗಳು ನಮ್ಮ ಹತ್ತಿರ ಹಣವಿಲ್ಲ ಎಂದು ಹೇಳಿರುವ ವರದಿ ಕೂಡ ಬಂದಿದೆ. ದಯಮಾಡಿ ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಜಿಲ್ಲಾಧಿಕಾರಿಗಳು ಹಣವಿಲ್ಲ ಎಂದು ಹೇಳಿದರೇ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಹೌದು, ಖಂಡಿತವಾಗಿ. ಆದ್ದರಿಂದ ಬಾಕಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ದಯಮಾಡಿ ತಕ್ಷಣ ಆದೇಶ ಕೊಡಬೇಕು. ನಾವು ಈಗಾಗಲೇ ಮನವಿ ಕೊಟ್ಟಿದೇವೆ. ಈಗಾಗಲೇ ಬೋರ್‌ವೆಲ್ ಕೊರೆಸಿದ್ದೇವೆ, ಪಂಪು, ಮೋಟಾರ್‌ಗಳನ್ನು ಹಾಕಿಸಿದ್ದೇವೆ, ಅದಕ್ಕೆ ಹಣ ಬಿಡುಗಡೆ ಮಾಡಿದಿದ್ದರೆ ನಮಗೆ ತೊಂದರೆಯಾಗುತ್ತದೆ. ಇನ್ನೊಂದು ವಿಷಯವೆಂದರೆ, ಕಳೆದ ಸರ್ಕಾರದಲ್ಲಿ 'ಸುವರ್ಣ ಭೂಮಿ' ಎನ್ನುವ ಯೋಜನೆ ಜಾರಿಯಲ್ಲಿತ್ತು.

ಅಧ್ಯಕ್ಷರು : ಆ ವಿಚಾರ ಇಲ್ಲಿ ಬೇಡ, ಇದು ಕುಡಿಯುವ ನೀರಿನ ವಿಚಾರ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಕುಡಿಯುವ ನೀರು ಮತ್ತು ಬರ ಎಂದೇ ಇದರಲ್ಲಿ ಇದೆ. ಇದು ಬರದ ವಿಚಾರ. ಹಿಂದೆ ಬಿ.ಜೆ.ಪಿ. ಸರ್ಕಾರವಿದ್ದಾಗ 'ಸುವರ್ಣ ಭೂಮಿ' ಯೋಜನೆಯಡಿಯಲ್ಲಿ ಬಿತ್ತನೆ ಬೀಜ, ಗೊಬ್ಬರಗಳನ್ನು ತೆಗೆದುಕೊಳ್ಳಲು ರೈತರಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರು.

ಅಧ್ಯಕ್ಷರು : ಇಲ್ಲಿರುವುದು ಬರಗಾಲದಲ್ಲಿ ಕುಡಿಯುವ ನೀರಿನ ಪ್ರಶ್ನೆಯಷ್ಟೇ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಹಾಗಾದರೆ ಬರೀ ಕುಡಿಯುವ ನೀರಿನ ಬಗ್ಗೆ ಮಾತ್ರ ಮಾತನಾಡಬೇಕೆ? ಇದನ್ನೂ ಸ್ವಲ್ಪ ಸೇರಿಸಿಕೊಳ್ಳಿ, ರೈತರಿಗೆ ತೊಂದರೆಯಾಗಿದೆ. ಸರ್ಕಾರ ಅದರ ಬಗ್ಗೆ ಏನಾದರೂ ಸ್ಪಷ್ಟೀಕರಣ ಕೊಡಬೇಕು. ಹಣ ಈ ವರ್ಷ ಬಿಡುಗಡೆಯಾಗುತ್ತದೋ ಇಲ್ಲವೋ ಎನ್ನುವ ಬಗ್ಗೆ ನಮಗೆ ಯಾವುದೇ ಮಾಹಿತಿಯಿಲ್ಲ. ಈ ಹಣವನ್ನು ಕೊಡುತ್ತೀರೋ, ಇಲ್ಲವೋ? ಹಳೆಯ ಯೋಜನೆಯನ್ನು ಮುಂದುವರೆಸುತ್ತೀರೋ ಇಲ್ಲವೇ ಎನ್ನುವ ಬಗ್ಗೆ ದಯಮಾಡಿ ಸರ್ಕಾರ ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು : ಯಾವ ವಿಚಾರದಲ್ಲಿ ಸ್ಪಷ್ಟೀಕರಣ ಕೊಡಬೇಕು?

ಶ್ರೀ ಹೆಚ್.ಸಿ. ಬಾಲಕೃಷ್ಣ : ಬರದ ವಿಚಾರದಲ್ಲಿ ಸ್ಪಷ್ಟೀಕರಣ ಕೊಡಬೇಕು. ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ತಕ್ಷಣ ಆದೇಶ ಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು, ಈಗ ಶಿವಲಿಂಗೇಗೌಡರು. ದಯವಿಟ್ಟು ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿರುವ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಮ್ಮ ನಾಯಕರು ನಿಯಮ 69ರ ಅಡಿಯಲ್ಲಿ ಪ್ರಸ್ತಾಪಿಸಿರುವುದಕ್ಕೆ ಪೂರಕವಾಗಿ ಕೆಲವು ವಿಷಯಗಳನ್ನು ಹೇಳಲು ಬಯಸುತ್ತೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ, ರಾಜ್ಯದಲ್ಲಿರುವ ಕುಡಿಯುವ ನೀರಿನ ಅಭಾವವನ್ನು ತೀರಿಸಲು, ಎಲ್ಲ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳನ್ನು ಕರೆಸಿ ಸಭೆ ಮಾಡಿರುವುದು ಎಲ್ಲರಿಗೂ ಗೊತ್ತಿರುವಂಥ ವಿಚಾರ. ಆದರೆ ಯಾವ

ಪ್ರಮಾಣದಲ್ಲಿ ಕಾರ್ಯೋನ್ಮುಖರಾದರೋ ಆ ಪ್ರಮಾಣದಲ್ಲಿ ಹಣ ಕೊಟ್ಟಿಲ್ಲ, ಕೊಟ್ಟಿರುವ ಹಣ ಸಾಕಾಗುತ್ತಿಲ್ಲ. ನಮ್ಮ ಕ್ಷೇತ್ರಕ್ಕೂ ಹಣ ಕೊಟ್ಟಿದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಕೇಂದ್ರ ಸರ್ಕಾರದ C.R.F. ನಿಂದ 20 ಲಕ್ಷ ರೂಪಾಯಿಗಳನ್ನು ಮತ್ತು ಕುಡಿಯುವ ನೀರಿಗೆ ಬೋರ್‌ವೆಲ್‌ಗಳನ್ನು ಕೊರೆಸುವುದಕ್ಕೆ ಜಿಲ್ಲಾ ಪಂಚಾಯತಿಯವರು 30 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಎಲ್ಲಿ ಸಾಕಾಗುತ್ತದೆ? 565 ಹಳ್ಳಿಗಳು ಎರಡು ವರ್ಷಗಳಿಂದ ಸತತವಾದಂಥ ಬರಗಾಲವನ್ನು ಎದಿರಿಸುತ್ತಿವೆ. ಟಾಸ್ಕ್ ಫೋರ್ಸ್ ಕಮಿಟಿಗೆ ನಮ್ಮನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದಾರೆ ಅದರಲ್ಲಿ ಎರಡನೇ ಮಾತಿಲ್ಲ. ಕೇಂದ್ರ ಸರ್ಕಾರದ C.R.F. ಜಿಲ್ಲಾಧಿಕಾರಿಗಳ ಹತ್ತಿರದ. ಆದರೆ ಅದನ್ನು ಉಪಯೋಗಿಸಿಕೊಂಡು ನಾವು ಬೋರ್‌ವೆಲ್ ಕೊರೆಯಲು ಆಗುವುದಿಲ್ಲ. ಅದರಲ್ಲಿ ಬರೀ maintenanceಮಾಡಬಹುದು. ಪೈಪ್‌ಲೈನ್ ಹಾಕುವುದು, ಪಂಪು, ಮೋಟಾರ್ ಇವುಗಳನ್ನು ಖರೀದಿ ಮಾಡಬಹುದು. ಸರ್ಕಾರ ಕಾರ್ಯೋನ್ಮುಖವಾಗಿಲ್ಲ ಎಂದು ಹೇಳಲು ನಾವು ತಯಾರಿಲ್ಲ. ಆದರೆ ಕೊಟ್ಟಿರುವ ಹಣ ಸಾಲದು. ಬೇರೆಯದು ನನಗೆ ಗೊತ್ತಿಲ್ಲ, ನಮ್ಮ ಜಿಲ್ಲೆಗೆ, ನಮ್ಮ ಕ್ಷೇತ್ರಕ್ಕೆ ಕೊಟ್ಟಿರುವ ಹಣದ ಬಗ್ಗೆ ನಾನು ಹೇಳುತ್ತಿದ್ದೇನೆ, ನಮ್ಮ ಕ್ಷೇತ್ರದ ಮಾಹಿತಿಯನ್ನು ನಾನು ನೀಡುತ್ತಿದ್ದೇನೆ, ಕೇಂದ್ರ ಸರ್ಕಾರದ C.R.F. ನಿಂದ 20 ಲಕ್ಷ ರೂಪಾಯಿಗಳನ್ನು maintenance ಗೆಂದು ಮತ್ತು 30 ಲಕ್ಷ ರೂಪಾಯಿಗಳನ್ನು ಟಾಸ್ಕ್ ಫೋರ್ಸ್ ಕಮಿಟಿಗಳಿಗೆ ಕೊಟ್ಟಿರುವುದು ಸತ್ಯ. ಇವತ್ತು ಒಂದು ಬೋರ್ ಕೊರೆಯಬೇಕೆಂದದರೆ 800 ರಿಂದ 1000 ಅಡಿಗಳವರೆಗೆ ಹೋಗಬೇಕು. ಹಾಗಾಗಿ, ಒಂದು ಬೋರ್‌ವೆಲ್ ಕೊರೆಯಲು ಒಂದು ಲಕ್ಷ ರೂಪಾಯಿ ಬೇಕು. 30 ಬೋರ್‌ವೆಲ್‌ಗಳನ್ನು ಕೊರೆದರೆ ಇವರ ಹಣ ಮುಗಿದು ಹೋಗುತ್ತದೆ. ಆದರೆ ಇವತ್ತು 565 ಹಳ್ಳಿಗಳಲ್ಲೂ ಕುಡಿಯುವ ನೀರಿಗೆ ಬರವಿದೆ. ರಾತ್ರಿ ನಮ್ಮನ್ನು ಕರೆದುಕೊಂಡು ಹೋಗಿ ಹೂವಿನ ಹಾರ ಹಾಕಿ ಸನ್ಮಾನ ಮಾಡಿ ಕಳುಹಿಸಿದರು, ಆಗ ಅವರು ನೀರನ್ನು ಕೇಳಲಿಲ್ಲ. ಆದರೆ ಬೆಳಗ್ಗೆ ಎಂಟು ಗಂಟಗೇ ಬಂದಿದ್ದಾರೆ. ಏಕೆಂದರೆ, ಅಲ್ಲಿ ಶಾಕ್ ಹೊಡೆಯುತ್ತಿದೆ, ನೀರು ರಾತ್ರಿಯೋ ನಿಂತು ಹೋಯಿತೆಂದು ಹೇಳಿದರು. ಇಂಥ ಪರಿಸ್ಥಿತಿ ಇದೆ. ಆದ್ದರಿಂದ ಕೊಟ್ಟಿರುವಂಥ ಹಣ ಸಾಕಾಗುತ್ತಿಲ್ಲ.

ಅಧ್ಯಕ್ಷರು : ಆಯಿತು, ಸಾಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ground reality ಏನಿದೆ ಎನ್ನುವುದನ್ನು ಹೇಳುತ್ತಿದ್ದೇನೆ. ನಾವು ಸುಮ್ಮನೆ ಭಾಷಣ ಮಾಡಲು ಇಲ್ಲಿಗೆ ಬಂದಿಲ್ಲ. ಗ್ರಾಮೀಣ ಭಾಗದಲ್ಲಿ ಏನು ಕೇಳಿ ಬರುತ್ತಿದೆ, ಜನ ನಮಗೆ ಏನು ಹೇಳುತ್ತಿದ್ದಾರೆ, ಜನ ನಮ್ಮನ್ನು ಏನು ಅನ್ನುತ್ತಿದ್ದಾರೆ, ನಾವು ಏನಾಗಿದ್ದೇವೆ ಎನ್ನುವುದನ್ನು ಹೇಳುತ್ತಿದ್ದೇನೆ ಒಂದು ಬಿಂದಿಗೆ ನೀರಿಗೆ ಹತ್ತು ರೂಪಾಯಿ ಕೊಡಬೇಕೆಂದು ಆಗಲೇ ಯಾರೋ ಹೇಳಿದರು. ಒಂದು ಟ್ಯಾಂಕ್ ನೀರಿಗೆ ಒಂದು ಸಾವಿರ ರೂಪಾಯಿ ಕೊಟ್ಟು ಗ್ರಾಮೀಣ ಪ್ರದೇಶಗಳಲ್ಲಿ ಕೊಂಡುಕೊಳ್ಳುತ್ತಿದ್ದಾರೆ. ಯಾರ ಜಮೀನಿನಲ್ಲಿ ನೀರಿದೆ, ಯಾರ ಹೊಲದಲ್ಲಿ ನೀರಿದೆ, ಯಾರ ಬೋರ್‌ವೆಲ್‌ನಲ್ಲಿ ನೀರಿದೆ ಅಲ್ಲಿಂದ ಕುಡಿಯುವ ನೀರಿಗೆ ಯಾರು ಬೇಕಾದರೂ ಹಿಡಿದುಕೊಂಡು ಹೋಗಬಹುದು, ಇದನ್ನು ರಾಷ್ಟ್ರೀಕರಣ ಮಾಡಿದ್ದೇವೆ ಎಂದಾದರೂ ಒಂದು ಕಾನೂನು ತನ್ನಿ.

ಅಧ್ಯಕ್ಷರು : ಆಯಿತು, ಸಾಕು ಬಹಳ ಬೇಡ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಿಯಮ 69ರಡಿಯಲ್ಲಿ ಚರ್ಚೆಗೆ ತೆಗೆದುಕೊಂಡರೂ ಇಷ್ಟೂ ಅವಕಾಶ ಕೊಡಲಿಲ್ಲವೆಂದರೆ ಹೇಗೆ? ಮೊದಲು ನಿಮ್ಮನ್ನು ನೋಡಿದಾಗ ನೀವು ಬಹಳ liberalಅಂದುಕೊಂಡಿದ್ದೆವು.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ : ಬಹಳ ಸಮಸ್ಯೆಯಿದೆ. ತಾಲ್ಲೂಕುವಾರು ಸಮಸ್ಯೆಯಿಂದ, ಅದನ್ನು ಹೇಳುತ್ತಿದ್ದಾರೆ, ದಯವಿಟ್ಟು ಅರ್ಥ ಮಾಡಿಕೊಳ್ಳಿ.. ನಿಮ್ಮ ಕಡೆ ಒಳ್ಳೆಯ ಮಳೆಯಾಗಿದೆ, ಹಾಗಾಗಿ ನೀರಿದೆ, ನಮ್ಮ ಕಡೆ ಬರಗಾಲವಿದೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ನಾವು ಹೇಳಬಾರದೇ? ನಮ್ಮ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಬಾರದೇ? ನಾನು realityಯನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಆಯಿತು, ವಿಷಯಗಳನ್ನು ಸಂಕ್ಷಿಪ್ತವಾಗಿ ತಂದಿದ್ದೀರಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಉಳ್ಳಂಥವರು ಒಂದು ಟ್ಯಾಂಕಿಗೆ ಒಂದು ಸಾವಿರ ರೂಪಾಯಿಗಳಂತೆ ನೀರನ್ನು ಮಾರುತ್ತಿದ್ದಾರೆ. ಹೀಗಾದರೆ, ಬಡವರು

ಹೇಗೆ ನೀರನ್ನು ಕೊಂಡುಕೊಂಡು ಜೀವನ ಮಾಡುವುದಕ್ಕಾಗುತ್ತದೆ? ಈ ಪರಿಸ್ಥಿತಿ ಇರುವುದರಿಂದ ದಯವಿಟ್ಟು ಇನ್ನೂ ಹೆಚಿನ ದುಡ್ಡನ್ನು ಟಾಸ್ಕ್ ಫೋರ್ಸ್‌ಗೆ ಮತ್ತು ಜಿಲ್ಲಾಧಿಕಾರಿಗಳಿಗೆ C.R.F.ನಿಂದ ಕೊಟ್ಟು ಕೂಡಲೇ ಬರದ ಬವಣೆಯನ್ನು ತಪ್ಪಿಸಲು ಕ್ರಮ ತೆಗೆದುಕೊಳ್ಳಿಬೇಕು. ಎಲ್ಲ ಕ್ಷೇತ್ರಗಳಲ್ಲೂ ಸಮಸ್ಯೆ ಇದೆ ಎಂದು ಹೇಳುವುದಿಲ್ಲ. ಕೆಲವು ಕ್ಷೇತ್ರದಲ್ಲಿ ಮಳೆಯಾಗಿದೆ. ದುರ್ದೈವದಿಂದ ನಮ್ಮ ಕ್ಷೇತ್ರದಲ್ಲಿ ಹೆಚ್ಚಿನ ಮಳೆಯಾಗಿಲ್ಲ. ಬೆಂಗಳೂರಿನಲ್ಲಿ ಮಾಳೆಯಾಗುತ್ತಿದೆ. ಅಲ್ಲೆಲ್ಲ ಬಹಳ ಮಳೆಯಾಗುತ್ತಿದೆ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು. ನಮ್ಮಲ್ಲಿ ಕೆಲವು ಕಡೆ ಇನ್ನೂ ಬಿತ್ತನೆಯೇ ಆಗಿಲ್ಲ.

ಅಧ್ಯಕ್ಷರು : ಆಯಿತು, ಸಾಕು, ಸಾಕು.

ಶ್ರೀ ಕೆ.ಎಂ. ಶಿವಲಿಂಗೇಗೌಡ : ನೀವು ಹೀಗೆ ಮಾಡಿದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ, ಕುಳಿತುಕೊಳ್ಳಿ ಎಂದರೆ ಕುಳಿತುಕೊಳ್ಳುತ್ತೇವೆ. ಇಷ್ಟೊಂದು ಕಂಡೀಷನ್ ಆದರೆ ಏನೂ ಪ್ರಯೋಜನವಾಗುವುದಿಲ್ಲ, ವಿಧಾನಸಭೆ ಬರುವುದೇ ತಪ್ಪು ಇಂದು ಅನಿಸುತ್ತದೆ. ಇದೇನು ಶೂನ್ಯವೇಳೆಯೇ? ನಿಯಮ 69ಅಡಿಯಲ್ಲಿ ಚರ್ಚೆಗೆ ಬಂದಿದೆ ಎಂದ ಮೇಲೆ ಅದರ ಬಗ್ಗೆ ಸವಿಸ್ತಾರವಾಗಿ ಬೆಳಕು ಚೆಲ್ಲದೇ ಹೋದರೆ ಹೇಗೆ ಸಾಧ್ಯ? ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಕಷ್ಟವಿದೆ ಎನ್ನುವುದನ್ನು ಮುಖ್ಯಮಂತ್ರಿಗಳಿಗೆ ಹೇಳಬೇಡವೇ? ಇಡೀ ರಾಜ್ಯದ ಪರಿಸ್ಥಿತಿ ಅವರಿಗೆ ಏನು ಗೊತ್ತಿರುತ್ತದೆ? ನಾವು ಹೇಳಿದರೆ ತಾನೇ ಅವರಿಗೆ ಗೊತ್ತಾಗುವುದು?

ಅಧ್ಯಕ್ಷರು : ನಿಮ್ಮ ನಾಯಕರು ಹೇಳಿರುವುದಕ್ಕೆ ಸ್ವಲ್ಪ ಒತ್ತು ಕೊಡುವುದು ಆಗಬೇಕು ಅಷ್ಟೇ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇದು ಏನೆಂದು ನಮಗೆ ಗೊತ್ತಾಗುತ್ತಿಲ್ಲ. ನಾವು ಪ್ರಸ್ತಾಪ ಮಾಡಲು ಪ್ರಾರಂಭ ಮಾಡಿದ ಕೂಡಲೇ ಕುಳಿತುಕೊಳ್ಳಿ ಎಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಹಾಗೆ ಹೇಳಬೇಡಿ, ಸುಮ್ಮನಿರಿ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ತಾವು ತುಂಬ ಹಿರಿಯರು, ಸಮಾಧಾನವಾಗಿ ಕೇಳಿ. 25ರ ಹುಡುಗರ ರೀತಿ ಸ್ಪೀಡ್ ಮಾಡುತ್ತಿದ್ದೀರಿಲ್ಲ. ಎಲ್ಲಕ್ಕೂ ಹೀಗೆ ಕಂಟ್ರೋಲ್ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಇನ್ನೂ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಿದೆ. ಇದನ್ನು ನಿನ್ನೆಯೂ ಹಾಕಿದ್ದಾರೆಂದು ನಾನು ವಿಶೇಷವಾಗಿ ತೆಗೆದುಕೊಂಡಿದ್ದೇನೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ತೆಗೆದುಕೊಳ್ಳುವುದಿದ್ದರೆ ಸಭೆಯನ್ನು ಇನ್ನೂ ಒಂದೆರಡೂ ದಿವಸ ಮುಂದುವರೆಸಿ.

ಅಧ್ಯಕ್ಷರು : ಆಯಿತು, ಈಗ ದತ್ತರವರು.

ಶ್ರೀ ವೈ.ಎಸ್.ವಿ. ದತ್ತ (ಕಡೂರು) : ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ತೀವ್ರ ಬರಗಾಲಕ್ಕೆ ಸಿಕ್ಕಿ ತತ್ತರಿಸಿರುವ ಹಳ್ಳಿಗಳಲ್ಲಿ ಆಗಿರುವಂಥ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ನಮ್ಮ ನಾಯಕರು ಈಗಾಗಲೇ ಸರ್ಕಾರದ ಗಮನ ಸೆಳೆಯುವುದಕ್ಕೆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದು ಇಡೀ ಸದಸದಲ್ಲಿರುವ ಎಲ್ಲ ಶಾಸಕರ ಸಮಸ್ಯೆಯೂ ಕೂಡ ಹೌದು. ಇದು ಕೇವಲ ನಮ್ಮದಲ್ಲ, ಆಡಳಿತ ಪಕ್ಷದ ಸದಸ್ಯೆಯೂ ಹೌದು.

ಅಧ್ಯಕ್ಷರು : ವಿಷಯಕ್ಕೆ ಬನ್ನಿ.

ಶ್ರೀ ವೈ.ಎಸ್.ವಿ. ದತ್ತ : ಬರುತ್ತೇನೆ ಅಧ್ಯಕ್ಷರೆ. ಏಕ್‌ದಂ body of the letterಗೆ ಬರುವುದಕ್ಕೆ ಆಗುವುದಕ್ಕೆ ಆಗುವುದಿಲ್ಲ. ನಾನೂ ಕ್ಷೇಮ, ನೀವೂ ಕ್ಷೇಮ ಎಂದು ಹೇಳಿಯೇ ಪ್ರಾರಂಭ ಮಾಡಬೇಕು. ನಮ್ಮ ನಾಯಕರು

ಹೇಳಿರುವುದಕ್ಕೆ ಪೂರಕವಾಗಿ ಶಿವಲಿಂಗೇಗೌಡರು ಅರಸೀಕೆರೆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೇಳಿದ್ದಾರೆ. ನಾನು ಒಂದೇ ಒಂದು ಮಾಹಿತಿಯನ್ನು ಸಚಿವರ ಮತ್ತು ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಇದು ನನ್ನ ಮಾಹಿತಿಯಲ್ಲ. ಮೊನ್ನೆ ಸದನದಲ್ಲಿ ಹಂಚಿರುವಂಥ ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ಸ್ಥಳೀಯ ಸಂಸ್ಥೆಗಳ ವರದಿ. ಆ ವರದಿಯ ಪುಟ 32 ರಲ್ಲಿ 'ನೀರಿನ ಗುಣಮಟ್ಟದ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಬಳಸಿಕೊಳ್ಳಲಾದ ಹಣ' ಎಂದು ಇದೆ.

ಅಧ್ಯಕ್ಷರು : ಅದು ಯಾವ ವರ್ಷದ್ದು?

ಶ್ರೀ ವೈ.ಎಸ್.ವಿ. ದತ್ತ : ನಾನು ಹೇಳುತ್ತಿರುವುದು 2012–13 ರ ಸಾಲಿನದ್ದು. ಇದನ್ನು ಪ್ರಸ್ತಾಪ ಮಾಡುವುದಕ್ಕೆ ಅರ್ಥವಿದೆ.

ಅಧ್ಯಕ್ಷರು : ಅರ್ಥ ಎಲ್ಲದಕ್ಕೂ ಇದೆರೀ,!

ಶ್ರೀ ವೈ.ಎಸ್.ವಿ. ದತ್ತ : ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿರುವ ಅಂಕಿ ಅಂಶಕ್ಕೆ ಒಂದು ಅರ್ಥ ಇದೆ. ಏನೆಂದರೆ, 2011–12ನೇ ಇಸವಿಯಲ್ಲಿ ಭಾರತ ಸರ್ಕಾರ 667 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಕರ್ನಾಟಕ ಸರ್ಕಾರ 518 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಒಟ್ಟು 1186 ಕೋಟಿ ರೂಪಾಯಿ ಬಿಡುಗಡೆ ಆಗಿದೆ. ಖರ್ಚಾಗಿರುವುದು ಒಟ್ಟಾರೆ 119 ಕೋಟಿ ರೂಪಾಯಿಗಳು ಆಗಿದೆ. ಅಂದರೆ, 10% ನಷ್ಟೂ ಸಹ ಹಣ ಖರ್ಚಾಗಿಲ್ಲವೆಂದು ಹೇಳಿರುವ report ಇದೆ.

ಅಧ್ಯಕ್ಷರು : ಮಿಸ್ಟರ್ ದತ್ತ, ನೀವು senior Member ಇದ್ದೀರಿ. ಇವನ್ನೆಲ್ಲ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದರೆ ಸರಿಯಾಗುತ್ತದೆ. ಈಗ ತುರ್ತು ಪರಿಸ್ಥಿತಿ ಏನಿದೆ. ಅದು ಕುಡಿಯುವ ನೀರು, ಆ ಬಗ್ಗೆ ಮಾತ್ರ ಹೇಳಿ.

ಶ್ರೀ ವೈ.ಎಸ್.ವಿ. ದತ್ತ : ಮಾನ್ಯ ಸಭಾಧ್ಯಕ್ಷರೆ, these stastistics are pertaining to drinking water problem. ನಾನು ಮಾತನಾಡು–ತ್ತಿರುವುದು ಕುಡಿಯುವ ನೀರಿನ ವಿಷಯ. ಇದಕ್ಕೆ ಸಂಬಂಧಪಟ್ಟ ಅಂಕಿಅಂಶ ಕೊಟ್ಟೆ. ಅಂದರೆ ಕುಡಿಯುವ ನೀರಿಗೆ ಯಾವ ಮಟ್ಟದಲ್ಲಿ ಹಣ ಬಿಡುಗಡೆಯಾಗುತ್ತದೆ, ಎಷ್ಟು ಹಣ ಖರ್ಚಾಗುತ್ತದೆ ಎಂದರೆ, ಆ ಖರ್ಚಾಗಿರುವುದು ಶೇಕಡ 10 ಎಂದರೆ ಅದರ ಅರ್ಥ ನಾವು ಎಷ್ಟು ಅಸಡ್ಡೆ ಮಾಡಿದ್ದೇವೆ ಎಂದಾಗುತ್ತದೆ. ನನ್ನ ಕ್ಷೇತ್ರವಾದ ಕಡೂರು ಕಳೆದ ಮೂರು ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿದೆ. ಡಾ: ಡಿ.ಎಂ. ನಂಜುಂಡಪ್ಪ ವರದಿ ಪ್ರಕಾರ ಇದು ಅತ್ಯಂತ ಹಿಂದುಳಿದ ತಾಲ್ಲೂಕು. ನಮ್ಮಲ್ಲಿ ಕಡೂರು ಬೀರೂರು ಪಟ್ಟಣಗಳಿಗೆ 15 ದಿನಗಳಿಗೆ ಒಂದು ಸಲ ನೀರು ಬಿಡುತ್ತಿದ್ದರು. ಈಗ ಆ ನೀರೂ ಬಿಡುವುದಕ್ಕಾಗುತ್ತಿಲ್ಲ. Private tanker ಗಳಲ್ಲಿ ನೀರು ಕೊಡುವ ಬಗ್ಗೆ ಶಿವಲಿಂಗೇಗೌಡರು ಹೇಳಿದರು. ಪುಣ್ಯಾತ್ಮರು ಅವರಿಗೆ ಸ್ವಲ್ಪ ಜಾಸ್ತಿ ಕೊಟ್ಟಿದ್ದಾರೆ. ಕಡೂರು ಕ್ಷೇತ್ರದಲ್ಲಿ Task force Committee ಗೆ ನಾನೇ Chairman,

ಸರ್ಕಾರದಿಂದ 10–10 ಲಕ್ಷ ಕೊಟ್ಟಿದ್ದಾರೆ. ಕಡೂರು town ಗೆ 10 ಲಕ್ಷ ಬೀರೂರು town ಗೆ 10 ಲಕ್ಷ ಹೀಗೆ 20 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಳ್ಳಿಗಳ ಕಥೆ ಏನಾಗಿದೆ ಎಂದರೆ, bore ಕೊರೆಯುವುದಕ್ಕೆ ಹಣ ಕೊಡುವುದಿಲ್ಲ, Pipe, motor ಗೆ ಮಾತ್ರ ಕೊಡುತ್ತೇವೆಂದು ಹೇಳುತ್ತಾರೆ. ಊರಿಗೆ ಹೋದ ಕೂಡಲೆ ಜನ ಏನು ಮಾಡುತ್ತಾರೆಂದರೆ, ಅಣ್ಣ ಬೋರ್ ಕೊರೆಸಣ್ಣ ಎಂದು ಹೇಳುತ್ತಾರೆ. ಇವತ್ತು ನಾವು ಯಾರಿಗೋ ಬೋರ್ ಕೊರೆಸಿದರೆ, action plan ನಲ್ಲಿ ಆಮೇಲೆ ಸೇರಿಸುವುದಕ್ಕೆ ಆಗುವುದಿಲ್ಲ. ನಾವು ಬೋರ್ ಕೊರೆಸಿರುವುದು ಲೆಕ್ಕಕ್ಕೆ ಬರುವುದಿಲ್ಲ. ಇಂಥ ಹಣೆಬರಹವಾಗಿದೆ. ಹಿಂದಿನ ಸರ್ಕಾರ ಇದ್ದಗ ಬಹಳ ಜೋರಾಗಿ ಕಡೂರು ಬೀರೂರು ಪಟ್ಟಣಕ್ಕೆ ಕದ್ರಾದಿಂದ ನೀರನ್ನು ಹರಿಸುತ್ತೇವೆ, ಅದನ್ನು 6 ತಿಂಗಳಲ್ಲಿ ಕೊಡುತ್ತೇವೆ, 3 ತಿಂಗಳಲ್ಲಿ ಕೊಡುತ್ತೇವೆಂದರು, ಈಗಾಗಲೇ 2 ವರ್ಷಗಳು ಕಳೆಯಿತು. Pipe ತೋಡುತ್ತಾ ಹೋದರೆ ಇಷ್ಟು ಅಡಿ ಬರುತ್ತದೆ, ಆ pipe ಜೋಡಿಸಲು ತೋಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು National Highway Department ನವರು ತಕರಾರು ಎತ್ತಿಕೊಂಡು ಕೂತಿದ್ದಾರೆ. pipe ತೋಡುವುದಕ್ಕೆ ಆಗುವುದಿಲ್ಲ, ಅರ್ಧಬರ್ಧ pipeಗೆ ಗುಂಡಿ ತೋಡಿ ಬಿಟ್ಟಿದ್ದಾರೆ. ಅದೇ ಲಕ್ಕವಳ್ಳಿ ಹತ್ತಿರ ರೈತರ ಜಮೀನಿನಲ್ಲಿ pipe ಹೋಗುತ್ತದೆಂದು ರೈತರು ತಕರಾರು ಎನ್ನುತ್ತಾರೆ, ಆ ನೆಪ ಇಟ್ಟುಕೊಂಡು ಅಲ್ಲಿ ಇಷ್ಟೊಂದು ತಕರಾರು ಆಗಿದೆ. ತರೀಕೆರೆಯಲ್ಲಿ ಹೋಗಿ pump house ಕಟ್ಟಿದ್ದಾರೆ, ಅಲ್ಲಿ ಸರ್ಕಾರಿ ಜಾಗ ಎಂದು ಕಟ್ಟಿದ್ದಾರೆ, ಅಲ್ಲಿ ಒಬ್ಬ owner ಆ ಜಾಗ ನನ್ನದು ಎಂದು ತಕರಾರು ಮಾಡಿಕೊಂಡು ಕುಳಿತಿದ್ದಾರೆ. ಇಂಥ ಸಂಕೀರ್ಣವಾಗಿರುವ ಸಮಸ್ಯೆಗಳ ಬಗ್ಗೆ ಇವತ್ತಿಗೂ ಕೂಡ ಕಡೂರು ಬೀರೂರು ಪಟ್ಟಣಗಳಿಗೆ ಕುಡಿಯುವ ನೀರು ಬರುವುದು ಮರೀಚಿಕೆಯಾಗಿದೆ. ನಾನು ಹೇಳುವುದೇನೆಂದರೆ, ಕುಡಿಯುವ ನೀರು ನಮ್ಮ ಮೂಲಭೂತವಾದ ಹಕ್ಕು, ಸಂವಿಧಾನದತ್ತವಾದ ಹಕ್ಕು. ಅದನ್ನು ಕೊಡಬೇಕಾದ ಜವಾಬ್ದಾರಿ ಯಾವುದೇ ಸರ್ಕಾರವಿರಲಿ, ಆ ಸರಕಾರದ ಜವಾಬ್ದಾರಿ. ನಾನು ಸರ್ಕಾರವನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರಕ್ಕೆ ಕುಡಿಯುವ ನೀರಿನ ಸಲುವಾಗಿ 20 ಲಕ್ಷ ರೂ. ಮಾತ್ರ ಬಿಡುಗಡೆ ಮಾಡಿರುವುದು ಯಾವುದಕ್ಕೂ ಸಾಕಾಗುವುದಿಲ್ಲ, ಆನೆ ಹೊಟ್ಟೆಗೆ ಅರೆಕಾಸಿನ

ಮಜ್ಜಿಗೆ ಎನ್ನುವ ಗಾದೆ ತರಹ ಏನೂ ಪ್ರಯೋಜನವಾಗುವುದಿಲ್ಲ. ದಯವಿಟ್ಟು ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಜೊತೆಗೆ, ಕಡೂರು ಬೀರೂರು ಪಟ್ಟಣಕ್ಕೆ ಕದ್ರಾದಿಂದ ಕುಡಿಯುವ ನೀರನ್ನು ಒದಗಿಸಬೇಕು. ಆ ಕಾರಣಕ್ಕೆ ಸರ್ಕಾರ ಕಡೂರಿಗೆ ವಿಶೇಷ ಗಮನ ಹರಿಸಬೇಕು. ಡಿ.ಎಂ. ನಂಜುಂಡಪ್ಪ ವರದಿ ಪ್ರಕಾರ ಅತ್ಯಂತ ಹಿಂದುಳಿದ ತಾಲ್ಲೂಕು ಆಗಿರುವುದರಿಂದ ಈ ಮಾನದಂಡವನ್ನಾದರೂ ಇಟ್ಟುಕೊಂಡು ನಮ್ಮ ಕ್ಷೇತ್ರಕ್ಕೆ ಕುಡಿಯುವ ನೀರಿನ ಸಲುವಾಗಿ ಹೆಚ್ಚು ಹಣ ಕೊಡಿ ಎಂದು ತಮ್ಮ ಮೂಲಕ ಸರ್ಕಾರವನ್ನು ಕೋರುತ್ತೇನೆ.

ಶ್ರೀ ಸಿ.ಬಿ. ಸುರೇಶ್ ಬಾಬು (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಚುನಾವಣೆಗಿಂತ ಮೊದಲು 13th Financeನಲ್ಲಿ ಎಲ್ಲಾ ಪಂಚಾಯಿತಿಗಳಿಗೂ ಕೂಡ 8-8 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರು. RDPR Ministerರವರು ಸದನದಲ್ಲಿದ್ದಾರೆ, ಅವರನ್ನು ಕೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ಆ ಹಣವನ್ನು ಕುಡಿಯುವ ನೀರಿಗೆ ಉಪಯೋಗಿಸಬೇಡಿ ಎಂದು ಆದೇಶ ಮಾಡಿದ್ದಾರಂತೆ. ಚುನಾವಣೆ ಇದ್ದಂಥ ಸಂದರ್ಭದಲ್ಲಿ ಏನಾಗಿದೆ ಎಂದರೆ, ಪಂಚಾಯಿತಿಯವರು, ಕುಡಿಯುವ ನೀರಿಗೊ, ನೈಪ್‌ಗೋ, ಮೋಟಾರ್‌ಗೋ ಆ ಹಣವನ್ನು ಬಳಸಿಬಿಟ್ಟಿದ್ದಾರೆ. ಆ ಹಣವನ್ನು ಕುಡಿಯುವ ನೀರಿಗೆ ಗ್ರಾಮ ಪಂಚಾಯಿತಿಯಲ್ಲಿ ಬಳಸಬೇಡಿ ಎಂದು ಸರ್ಕಾರದವರು ಹೇಳಿದ್ದಾರಂತೆ. ಅದನ್ನು ಮಾರ್ಪಾಡು ಮಾಡಿ ಪಂಚಾಯಿತಿಯಲ್ಲಿ ಖರ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಮತ್ತು ಪುರಸಭೆ ವ್ಯಾಪ್ತಿಯಲ್ಲಿ ಬರಗಾಲದ ಸಮಯದಲ್ಲಿ ಬೋರ್ ಕೊರೆಯುವುದಕ್ಕೆ ಇನ್ನೂ ಕೂಡ ಹಣ ಬಿಡುಗಡೆ ಮಾಡಿಲ್ಲ. ದಯಮಾಡಿ ಅದನ್ನೂ ಕೂಡ ಬಿಡುಗಡೆ ಮಾಡುವುದಕ್ಕೆ ಹೇಳಬೇಕು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) : ಮಾನ್ಯ ಅಧ್ಯಕ್ಷರೆ, 176 ತಾಲ್ಲೂಕುಗಳಲ್ಲಿ 155 ತಾಲ್ಲೂಕುಗಳು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಿದೆ. ಅದರಲ್ಲಿ ಸಕಲೇಶಪುರ ತಾಲ್ಲೂಕು ಸೇರಿದೆ ಎಂದರೆ ಬಹುಶಃ ಆ ಭಾಗದ ಕುಡಿಯುವ ನೀರಿನ ಸಮಸ್ಯೆ ಎಷ್ಟು ತೀವ್ರತರವಾಗಿದೆ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು, ಮಾನ್ಯ ಸಭಾಧ್ಯಕ್ಷರೆ, ತಾವೂಕೂಡ ಮಲೆನಾಡು ಭಾಗದಿಂದ ಬಂದಿರತಕ್ಕಂಥವರು. ಅಲ್ಲೂ ಕೂಡ 1 ಸಾವಿರ ಅಡಿಗಿಂತ

ಹೆಚ್ಚಾಗಿ ಕೊಳವೆ ಬಾವಿ ಕೊರೆಯಬೇಕೆಂದರೆ ನೀರಿನ ಸಮಸ್ಯೆ ಯಾವ ರೀತಿ ಇದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ನನ್ನ ಸಕಲೇಶಪುರ ತಾಲ್ಲೂಕು, ಆಲೂರು ತಾಲ್ಲೂಕು, ಹಾಸನ ತಾಲ್ಲೂಕಿನ ಕಸಬಾ ಹೋಬಳಿ ಪೂರ್ತಿ ಪ್ರದೇಶ ನನಗೆ ಬರುತ್ತದೆ. ಇವತ್ತು ನಮ್ಮಲ್ಲಿರತಕ್ಕಂಥ ಸುಮಾರು 584 revenue ಗ್ರಾಮಗಳಲ್ಲಿ 200ಕ್ಕೂ ಹೆಚ್ಚು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಸರ್ಕಾರ ಮಂಜೂರು ಮಾಡುತ್ತಿರುವುದು ಕೇಲವು 10 ಲಕ್ಷ , 15 ಲಕ್ಷ ರೂಪಾಯಿಗಳು. ಒಂದು ಬೋರ್‌ವೆಲ್ ಅನ್ನು ಕೊರೆಸಬೇಕೆಂದರೆ ಕನಿಷ್ಠ ಒಂದೂವರೆ ಲಕ್ಷ ರೂಪಾಯಿಗಳಿಂದ 1 ಲಕ್ಷ 60 ಸಾವಿರ ರೂಪಾಯಿಗಳ ವರೆಗೆ ಆಗುತ್ತದೆ. ಹೀಗಿರುವಾಗ ಆ ಹಣ ಅದು ಯಾವ ಮೂಲೆಗೆ ಸಾಕಾಗುತ್ತದೆ? ಸರ್ಕಾರ ಕೊಡುವ ಹಣದಲ್ಲಿ 8 ರಿಂದ 10 ಬೋರ್‌ವೆಲ್‌ಗಳನ್ನು ಮಾತ್ರ ಕೊರೆಸಬಹುದು. ಆದ್ದರಿಂದ, ದಯಮಾಡಿ ಪ್ರತಿ ಬರಗಾಲ ಪೀಡಿತ ತಾಲ್ಲೂಕುಗಳಿಗೆ ಕನಿಷ್ಠ 1 ಕೋಟಿ ರೂಪಾಯಿಗಳನ್ನು ಕೊಳವೆಬಾವಿ ಕೊರೆಯುವುದಕ್ಕೆ ಮತ್ತು ಪೈಪುಗಳನ್ನು ಅಳವಡಿಸುವುದಕ್ಕೆ ಮಂಜೂರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಆರ್. ಸುಧಾಕರ್‌ಲಾಲ್ (ಕೊರಟಗೆರೆ) : ಕೊರತೆಗಳ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಜ್ವಲಂತ ಸಮಸ್ಯೆಯಾಗಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಹಾಗಾಗಿ ಈಗಾಗಲೇ ನಾವು ಬೋರ್‌ವೆಲ್ ಕೊರೆಯುವಂಥವರಿಗೆ request ಮಾಡಿಕೊಂಡು ಸುಮಾರು 50 ಬೋರ್‌ವೆಲ್‌ಗಳನ್ನು ಕೊರೆಸಿದ್ದು, ಅದರಲ್ಲಿ ಸುಮಾರು 40 ಬೋರ್‌ವೆಲ್‌ಗಳಲ್ಲಿ ನೀರೂ ಸಹ ಸಿಕ್ಕಿದೆ. ಆದರೆ, ಪಂಪ್, ಮೋಟಾರ್ ಹಾಕಿಸುವುದಕ್ಕೆ ಹಣವಿಲ್ಲವೆಂದು ಅಲ್ಲಿ ಕೊರೆದಿರುವ ಬೋರ್‌ವೆಲ್‌ಗಳೂ ಸಹ ಉಪಯೋಗಕ್ಕೆ ಬರುತ್ತಿಲ್ಲ. ಈಗಾಗಲೇ Task-force ನಲ್ಲಿ ಏನು ಹಣ ಬಿಡುಗಡೆ ಮಾಡಿದ್ದಾರೆ, ಆ ಒಂದು ಆದೇಶದಲ್ಲಿ ಕೊರಟಗೆರೆ ತಾಲ್ಲೂಕಿಗೆ ಮಾತ್ರ ಉಪಯೋಗಿಸಬೇಕೆಂದು ಹೇಳಿದ್ದಾರೆ. ಆದರೆ, ನನ್ನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಕೊರಟಗೆರೆ ತಾಲ್ಲೂಕಿನ ಜೊತೆಗೆ ಮಧುಗಿರಿ ತಾಲ್ಲೂಕಿನ ಪುರುವಾರ ಹೋಬಳಿ ಸಹ ಸೇರುತ್ತದೆ, ತುಮಕೂರು ತಾಲ್ಲೂಕಿನ ಕೋರಾ ಹೋಬಳಿ ಸಹ ಸೇರುತ್ತದೆ. ಹಾಗಾಗಿ ಮುಂದಿನ ದಿನಗಳಲ್ಲಿ ಹಣ ಬಿಡುಗಡೆ ಮಾಡಿದ ಸಂದರ್ಭದಲ್ಲಿ ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ Task-force ಎನ್ನುವ

ನಿಟ್ಟಿನಲ್ಲಿ ಹಣ ಬಿಡುಗಡೆ ಮಾಡಬೇಕು. ಇದರ ಜೊತೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ 13ನೇ ಹಣಕಾಸು ಯೋಜನೆಯಲ್ಲಿ ಏನು ಹಣ ಬಿಡುಗಡೆ ಮಾಡಿದ್ದಾರೆ, ಆ ಹಣವನ್ನು ಯಾವುದೇ ಕುಡಿಯುವ ನೀರಿನ ಪೈಪುಗಳನ್ನು ಕೊಳ್ಳಲಿಕ್ಕೆ ಅವಕಾವಿಲ್ಲವೆನ್ನುವ ಸುತ್ತೋಲೆಯನ್ನು ಏನು RDPR ಇಲಾಖೆಯಿಂದ ಹೊರಡಿಸಿದ್ದಾರೆ, ದಯವಿಟ್ಟು ಅದನ್ನು ಮಾರ್ಪಾಟು ಮಾಡಿ emergency ಇರುವ ಸಂದರ್ಭದಲ್ಲಿ ಆ ಹಣವನ್ನು ಗ್ರಾಮ ಪಂಚಾಯಿತಿಗಳು ಉಪಯೋಗಿಸಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ) : ಮಾನ್ಯ ಅಧ್ಯಕ್ಷರೆ, ನಮ್ಮ ನಾಯಕರು ಸೇರಿದಂತೆ ಕುಡಿಯುವ ನೀರಿಗೆ ಬಹಳಷ್ಟು ಸದಸ್ಯರು ಚರ್ಚೆ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಮ್ಮ ಮೂಲಕ ತರಬಯಸುವುದೇನೆಂದರೆ, ಕುಡಿಯುವ ನೀರಿನ ಜೊತೆಗೆ 2 ವರ್ಷಗಳ ಬರಗಾಲದಿಂದ ರೈತರಿಗೆ ಸಾಕಷ್ಟು ಸಮಸ್ಯೆಯಾಗಿದೆ. ಮೊನ್ನೆ ತೆಂಗಿನ ವಿಚಾರದಲ್ಲಿ ಮಾತನಾಡಿದಾಗಲೂ ಸಹ ಹೇಳಿದ್ದೆವು, ಬಹಳಷ್ಟು ತೆಂಗಿನ ಮರಗಳು ಬಿದ್ದುಹೋಗಿವೆ. ಅದಕ್ಕೆ ಪರಿಹಾರ ಕೊಡಬೇಕೆಂದು ಈ ಸದನದಲ್ಲಿ ಚರ್ಚೆಯಾಗಿದೆ. ಅದಕ್ಕೆ ಸರ್ಕಾರದ ಕಡೆಯಿಂದ ಸರಿಯಾದ ರೀತಿಯಲ್ಲಿ ಉತ್ತರ ಬಂದಿಲ್ಲ.

ಅಧ್ಯಕ್ಷರು : ಆ ವಿಷಯ ಈಗ ಬೇಡ. ಕುಡಿಯುವ ನೀರಿನ ವಿಷಯವಾಗಿ ಮಾತ್ರ ಮಾತನಾಡಿ.

ಶ್ರೀ ಎನ್. ಚಲುವರಾಯಸ್ವಾಮಿ : ಬರಗಾಲದಿಂದ ರೈತರಿಗೆ ಸಮಸ್ಯೆಯಾಗಿದೆ. ಅದರ ಜೊತೆಗೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಇಲಾಖೆಯಿಂದ ಟಿ.ಸಿ.ಗಳು ಸುಟ್ಟು ಹೋದರೆ ಕನಿಷ್ಠ 3–4 ತಿಂಗಳುಗಳ ವರೆಗೆ ಟಿ.ಸಿ. replace ಆಗುತ್ತಿಲ್ಲ. ನೀರನ್ನು ನಂಬಿ ಬೆಳೆ ಹಾಕಿರತಕ್ಕಂಥ ರೈತರ ಪರಿಸ್ಥಿತಿ ಏನು? ಎಲ್ಲವೂ ಒಂದಕ್ಕೊಂದು ಲಿಂಕ್ ಇರುವುದರಿಂದ ಹೇಳುತ್ತೇನೆ. ಕೆಟ್ಟು ಹೋಗಿರುವ ಟಿ.ಸಿ.ಗಳನ್ನು ಕೆಟ್ಟು ಹೋದ 48 ಗಂಟೆಯೊಳಗೆ replace ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ಕುಡಿಯುವ ನೀರನ್ನು ಒದಗಿಸುವ ಸಂಬಂಧ ಹಾಕಿಸಿದ್ದ ಟಿ.ಸಿ. ಸುಟ್ಟುಹೋಗಿ ಅದನ್ನು 15 ದಿವಸ 20 ದಿವಸ, ತಿಂಗಳು ಕಳೆದರೂ ಬೇರೆಯದನ್ನು ಹಾಕಿಲ್ಲವೆಂದರೆ ಹೇಗೆ? ಬೇಕಾದರೆ ಈ ಮಾಹಿತಿ ತರಿಸಿಕೊಳ್ಳಿ ಮೈಸೂರಿನ ತಮ್ಮ ಕ್ಷೇತ್ರದಲ್ಲೂ ಇದೇ ಸಮಸ್ಯೆ ಇದೆ.

ಮುಖ್ಯವಾಗಿ ವಿದ್ಯುತ್ ಇಲಾಖೆಯಲ್ಲಿ ಕನಿಷ್ಠ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಯಾವುದೇ ಟಿ.ಸಿ. ಸುಟ್ಟರೆ, ಪ್ರತಿ ತಾಲ್ಲೂಕಿನಲ್ಲಿ 50 additional T.C. ಗಳು Spare ಇರುವಂತೆ ನೋಡಿಕೊಳ್ಳಬೇಕು. Spare T.C.ಗಳು ಇಲ್ಲದಿರುವುದರಿಂದ ಬಹಳಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಏನು ಈ Task-force committeeಗಳಿಗೆ ಹಣ ಕೊಡುತ್ತಿದ್ದೀರಿ ಅದು ಕೇವಲ repair ಗೆ ಮಾತ್ರ ಎಂದು ನಮ್ಮ ಶಾಸಕರು ಹೇಳುತ್ತಿದ್ದಾರೆ. Borewell ಹಾಕಲಿಕ್ಕೆ ಅವಕಾಶ ಮಾಡಿಕೊಡಬೇಕು. RDPR Minister ರವರು ಸದನದಲ್ಲಿ ಇರುವುದರಿಂದ ಮಾನ್ಯ ಮುಖ್ಯಮಂತ್ರಿಯವರು ಅವರ ಮೂಲಕವಾದರೂ ಸಮಸ್ಯೆ ಇರುವ ಕಡೆ sufficient ಆಗಿ borewell ಕೊರೆಸಲಿಕ್ಕೆ ವ್ಯವಸ್ಥೆ ಮಾಡಬೇಕು. ಈಗ ಏನಾಗಿದೆ ಎಂದರೆ, ರೈತರಿಗೆ ಒಳ್ಳೆಯದು ಮಾಡಿ ಎಂದು ಅಧಿಕಾರಿಗಳಿಗೆ ಹೇಳಿದರೆ 15 ದಿವಸ ತಡವಾಗಿ circular ಅನ್ನು ಕಳುಹಿಸುತ್ತಾರೆ. ಸಾಯಂಕಾಲ ಬೆಳಗ್ಗೆ ಎನ್ನದೆ ಕೂಡ circular ಹೋಗುತ್ತವೆ.

ಬೋರ್‌ವೆಲ್ ಕೊರೆಯಲು ಅವಕಾಶವಿಲ್ಲವೆಂದರೆ ಯಾವುದರಿಂದ ನೀರು ಕೊಡುತ್ತಾರೆ? ಎಲ್ಲೆಲ್ಲಿ ಕುಡಿಯುವ ನೀರಿಗೆ ತೊಂದರೆಯಿದೆ ಅಲ್ಲೆಲ್ಲಾ ಜೆಡ್‌ಪಿಯಿಂದ ಬೋರ್‌ವೆಲ್ ಕೊರೆಸುವುದಕ್ಕೆ ತಾವು ಒಂದು ಡೈರೆಕ್ಷನ್ ಕೊಡಿ. ಇಲ್ಲವೆಂದರೆ ಟಾಸ್ಕ್‌ಫೋರ್ಸ್‌ನ ಮೂಲಕ ಇರತಕ್ಕಂಥ ಹಣದಲ್ಲಾದರೂ ಬೋರ್‌ವೆಲ್‌ಗಳನ್ನು ಕೊರೆಸುವುದಕ್ಕೆ ಅನುಮತಿ ಕೊಡಿ. ಯಾವುದಾದರೊಂದು ರೀತಿಯಲ್ಲಿ ಬೋರ್‌ವೆಲ್‌ಗಳನ್ನು ಕೊರೆಸುವುದಕ್ಕೆ ಅನುಮತಿ ಕೊಡಬೇಕು. ಟಿಸಿ ಸಮಸ್ಯೆ ಬಗೆಹರಿಸದಿದ್ದರೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುದಕ್ಕಾಗುವುದಿಲ್ಲ, ರೈತರ ಸಮಸ್ಯೆಯೂ ಬಗೆಹರಿಸುವುದಕ್ಕಾಗುವುದಿಲ್ಲ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಕಡೆಗೆ ವಿಶೇಷವಾಗಿ ಗಮನ ಹರಿಸಿ ಇವತ್ತೇ ತಾವೊಂದು ಆದೇಶ ಕಳುಹಿಸುವುದು ಸೂಕ್ತ.

ಶ್ರೀ ಡಿ. ನಾಗರಾಜಯ್ಯ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಅನೇಕ ಸದಸ್ಯರು ಈ ಸಮಸ್ಯೆ ಬಗ್ಗೆ ಮಾತನಾಡಿ ತಮಗೆ ಮನವರಿಕೆ ಮಾಡಿದ್ದಾರೆ. ಹಿಂದಿನ ಸರ್ಕಾರ ಇದ್ದಂಥ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿ ಸುಮಾರು 60 ಬೋರ್‌ವೆಲ್‌ಗಳನ್ನು ಯಾವುದೇ ಮಂಜೂರಾತಿ ಇಲ್ಲದೇ

ಕೊರೆಸಿರುತ್ತಾರೆ, ಇದಕ್ಕೆ ಹಣ ಬಿಡುಗಡೆಯಾಗಿಲ್ಲ. ಸನ್ಮಾನ ಮುಖ್ಯಮಂತ್ರಿಗಳು ಕಳೆದ ವಾರದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಸಿ.ಎಸ್.ರವರನ್ನು ಕರೆದು ಸಭೆಮಾಡುವಂಥ ಸಂದರ್ಭದಲ್ಲಿ ನಮ್ಮ ಜಿಲ್ಲೆಗೆ 20 ಕೋಟಿ ರೂಪಾಯಿ ಕೊಟ್ಟಿದ್ದು ಒಂದೊಂದು ತಾಲ್ಲೂಕಿಗೆ 25 ಲಕ್ಷ ರೂಪಾಯಿಗಳು ಬಂದಿವೆ. ಅವಶ್ಯಕವಾಗಿರತಕ್ಕಂಥ ಕಡೆಗೆ ನಾವು ಸುಮಾರು 120 ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆಂದು ಪಟ್ಟಿ ಮಾಡಿ ಕಳುಹಿಸಿದ್ದೇವೆ. ಈಗ ಬಿಡುಗಡೆಯಾಗಿರುವ ಹಣ ಕೇವಲ 20 ಬೋರ್‌ವೆಲ್‌ಗಳಿಗೆ ಮಾತ್ರ ಸಾಕಾಗುತ್ತದೆ. ಕೊರೆಯ–ಬೇಕಾಗಿರುವುದು ಮತ್ತು ಕೊರೆದಿರತಕ್ಕಂಥದ್ದು ಎರಡೂ ಸೇರಿ 120 ಬೋರ್‌ವೆಲ್‌ಗಳಿಗೆ ಹಣ ಬೇಕಾಗಿದೆ. ನಮ್ಮ ತಾಲ್ಲೂಕಿನ ಕೆಲವು ಹಳ್ಳಿಗಳಿಗೆ ಸುಮಾರು ಒಂದು ವರ್ಷದಿಂದ ಟ್ಯಾಂಕರ್‌ನಿಂದ ನೀರು ಕೊಡಲಾಗುತ್ತಿದೆ. ಈಗ ನಮ್ಮ ಅಧಿಕಾರಿಗಳು 30 ದಿವಸಗಳ ನಂತರ ಟ್ಯಾಂಕರ್ ಮೂಲಕ ನೀರು ಕೊಡುವುದಕ್ಕೆ ಬರುವುದಿಲ್ಲ, ಏಕೆಂದರೆ ಆಡಿಟ್ ಅಬ್ಜೆಕ್ಷನ್ ಆಗುತ್ತದೆ ಅದಕ್ಕೆ ಬೇರೆ ಬದಲಿ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಾರೆ. ಬದಲಿ ವ್ಯವಸ್ಥೆ ಮಾಡಲಿಕ್ಕಾಗಿಯೇ ಒಂದು ಹಳ್ಳಿಯಲ್ಲಿ 9, ಒಂದು ಹಳ್ಳಿಯಲ್ಲಿ 6, ಒಂದು ಹಳ್ಳಿಯಲ್ಲಿ 10 ಬೋರ್‌ಗಳನ್ನು ಕೊರೆದಿದ್ದರೂ ನೀರು ಬಂದಿಲ್ಲ. ನಾರ್ಮ್ಸ್ ಪ್ರಕಾರ 30 ದಿವಸಗಳ ನಂತರ ಟ್ಯಾಂಕರ್ ಮೂಲಕ ನೀರು ಕೊಡಕೂಡದೆಂದು ಆದೇಶವಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಅಧ್ಯಕ್ಷರು : ಯಾವುದು ಆದೇಶ?

ಶ್ರೀ ಡಿ. ನಾಗರಾಜಯ್ಯ : 30 ದಿವಸಗಳ ನಂತರ ಟ್ಯಾಂಕರ್ ಮೂಲಕ ನೀರು ಕೊಡಕೂಡದು ಅಷ್ಟರೊಳಗೆ ಬದಲಿ ವ್ಯವಸ್ಥೆ ಮಾಡಬೇಕೆಂದು ಆದೇಶವಿದೆ ಇಲ್ಲದಿದ್ದರೆ ಆಡಿಟ್ ಅಬ್ಜೆಕ್ಷನ್ ಬರುತ್ತದೆ.ಹೀಗಾಗಿ ಟ್ಯಾಂಕರ್ ಮೂಲಕ ನೀರು ಕೊಡುವುದಕ್ಕಾಗುವುದಿಲ್ಲವೆಂದು ಅಧಿಕಾರಿಗಳು ಉತ್ತರ ಹೇಳುತ್ತಿದ್ದಾರೆ. ಒಂದು ವರ್ಷದಿಂದ ಟ್ಯಾಂಕರ್ ಮೂಲಕ ನೀರು ಒದಗಿಸತಕ್ಕಂಥ ಹಳ್ಳಿಗಳಿಗೆ ಬದಲಿ ಯಾವ ರೀತಿ ನೀರನ್ನು ಒದಗಿಸಬೇಕು ಎನ್ನುವುದರ ಬಗ್ಗೆ ಸರ್ಕಾರ ನಮ್ಮ ಗಮನಕ್ಕೆ ತರಬೇಕಾಗುತ್ತದೆ. ಸಭೆಯಲ್ಲಿ ಡಿಸಿ ಯವರು ನಮ್ಮ ಹತ್ತಿರ 10 ಕೋಟಿ ಹಣವಿದೆ ಎಂದು ಒಪ್ಪಿಕೊಂಡಿದ್ದಾರೆ. ಇದರಲ್ಲಿ ಹುಲ್ಲಿಗೆ ಎಂದು 3 ಕೋಟಿ ಇಟ್ಟಿದ್ದಾರೆ, ಕುಡಿಯುವ ನೀರು ಟ್ಯಾಂಕರ್‌ಗಳ ಮೂಲಕ ಸರಬರಾಜು ಮಾಡುವುದಕ್ಕೆ ಸ್ವಲ್ಪ ಹಣ ಇಟ್ಟಿದ್ದಾರೆ.

ಪಂಪ್‌ಸೆಟ್ ಮತ್ತು ಬೋರ್‌ಗಳಿಗೆಂದು ಸ್ವಲ್ಪ ಹಣ ಇಟ್ಟಿದ್ದಾರೆ. ಸ್ವಾಮಿ ಬೋರ್‌ವೆಲ್ ಕೊರೆದು ಒಂದು ವರ್ಷವಾಗಿದೆ ಆ ಹಣವನ್ನು ಕೊರೆದಿರುವ ಬೋರ್‌ವೆಲ್‌ಗಳಿಗೆ ಮರುಪಾವತಿಸಿಲ್ಲ.

ಅಧ್ಯಕ್ಷರು : ಹುಲ್ಲು ಬಂದಿದೆಯ? ಹುಲ್ಲು ಒದಗಿಸಿದ್ದಾರೆಯೆ?

ಶ್ರೀ ಡಿ. ನಾಗರಾಜಯ್ಯ : ಹುಲ್ಲು ನಮ್ಮ ತಾಲ್ಲೂಕಿನಲ್ಲಿ ಅವಶ್ಯಕತೆಯಿಲ್ಲ. ಅವಶ್ಯಕತೆ ಇರುವ ಕಡೆ ಹುಲ್ಲನ್ನು ಒದಗಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮಾನ್ಯ ಚಲುವರಾಯ ಸ್ವಾಮಿಯವರು ಹೇಳಿದ ಹಾಗೆ ಅದನ್ನು ಪರಿವರ್ತನೆ ಮಾಡುವ ನಿಟ್ಟಿನಲ್ಲಿ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಬೇಕೆಂದು ಡಿ.ಸಿ. ಯವರಿಗೆ ಆದೇಶ ಮಾಡಬೇಕಾಗುತ್ತದೆ. ಈಗಾಗಲೇ ನಮ್ಮ 120 ಹಳ್ಳಿಗಳಿಗೆ ತೊಂದರೆಯಾಗಿದೆ. ಇವುಗಳಿಗೆ CRF ನಿಂತು ಕೊಡುತ್ತೀರೋ? Scarcity ಯಿಂದ ಕೊಡುತ್ತೀರೋ? ಒಟ್ಟಿನಲ್ಲಿ 120 ಬೋರ್‌ವೆಲ್‌ಗಳಿಗೆ ಹಣ ಕೊಡದೇ ಹೋದರೆ ಜನಗಳಿಗೆ ನೀರು ಒದಗಿಸುವುದಕ್ಕೆ ತುಂಬಾ ಕಷ್ಟವಾಗುತ್ತದೆ. ನಾವು ಶಾಸಕರಾಗಿ ಕ್ಷೇತ್ರದಲ್ಲಿ ಓಡಾಡಲು ಬಹಳ ನೋವಾಗುತ್ತದೆ. ಆ ಕಾರಣದಿಂದ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೋರಿಕೊಳ್ಳುವುದೇನೆಂದರೆ, ಯಾವುದೇ ರೂಪದಲ್ಲಿಯಾದರೂ ಸರಿ ಕುಡಿಯುವ ನೀರಿಗೆ ಅವ್ಯವಸ್ಥೆಯಾಗಿ-ರುವುದನ್ನು ಸರಿಪಡಿಸತಕ್ಕಂಥದ್ದಕ್ಕೆ ತಕ್ಷಣ ಕ್ರಮ ಜರುಗಿಸಬೇಕು. ತುರ್ತಾಗಿ ಬೋರ್ ಕೊರೆಯಬೇಕೆಂದರೆ ಕರೆದ ತಕ್ಷಣ ಬೋರ್‌ವೆಲ್ ಕೊರೆಯುವವನು ಬರುವುದಿಲ್ಲ. 60 ಬೋರ್‌ವೆಲ್‌ಗಳಿಗೆ ದುಡ್ಡು ಕೊಡಬೇಕಾಗಿದೆ. ದುಡ್ಡು ಕೊಟ್ಟಿಲ್ಲವೆಂದರೆ ಅವನು ಬಂದು ಯಾವ ರೀತಿ ಬೋರ್‌ವೆಲ್ ಕೊರೆಯುವುದಕ್ಕೆ ಸಾಧ್ಯ? ಆ ಕಾರಣಕ್ಕಾಗಿ ತಾವು ತಕ್ಷಣ ನಮ್ಮ ನೆರವಿಗೆ ಬರಬೇಕು ಎಂದು ತಮ್ಮ ಮುಖೇನ ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಂಡು ನನ್ನ ಮಾತು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಉತ್ತರ ಕೊಡಿ.

ಶ್ರೀ ಎಸ್.ಚಿಕ್ಕಮಾದು : ನಾನು ಯಾವಾಗಲೂ ಮಾತನಾಡುವುದಿಲ್ಲ. ನನಗೆ ಒಂದು ನಿಮಿಷ ಅವಕಾಶ ಕೊಡಿ. ನಮ್ಮ ಕಡೆಗೆ ಬಹಳ ತೊಂದರೆಯಿದೆ.

ಅಧ್ಯಕ್ಷರು : ಚಿಕ್ಕಮಾದುರವರೆ, ಸಾಕಷ್ಟು ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಬೇರೆ ಸಬ್ಜೆಕ್ಟ್ಸ್ ಇವೆ. ಏನಾದರೂ ಕೇಳಬೇಕೆಂದರೆ ಕ್ಲಾರಿಫಿಕೇಷನ್‌ನಲ್ಲಿ ಕೇಳಿ, ಅವಕಾಶ ಕೊಡುತ್ತೇನೆ. ಖಂಡಿತವಾಗಿಯೂ

ಕ್ಲಾರಿಫಿಕೇಷನ್ ಇದ್ದರೆ ಕೇಳಿ, ಕೊಡುತ್ತೇನೆ. ಆಯಿತು ಬಿಡಿ. ಸ್ವಲ್ಪ ತಾಳಿ. ಈಗ ಇದನ್ನೇ ಪೂರ್ತಿ ಚರ್ಚೆ ಮಾಡಿಕೊಂಡು ಕುಳಿತುಕೊಂಡರೆ ಬೇರೆ ಸಬ್ಜೆಕ್ಟ್‌ಸ ಇಲ್ಲವೆ? ನಾನು ಮ್ಯಾಕ್ಸಿಮಮ್ ಎಲ್ಲರಿಗೂ ಅವಕಾಶ ಕೊಟ್ಟಿದ್ದೇನೆ. ಆಯಿತು ತಾವೊಬ್ಬರು ಏನು ಹೇಳುತ್ತೀರೋ ಹೇಳಿ. ಆಯಿತು, ಅವರು ಹೇಳುತ್ತಾರೆ ಬಿಡಿ, ಮಂತ್ರಿಗಳೇ ಒಂದು ನಿಮಿಷ ಅವರು ಮುಗಿಸಲಿ.

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ ತಾವೂ ಕೂಡ ಮಲೆನಾಡು ಭಾಗದಿಂದ ಬಂದಿದ್ದೀರಿ. ವಾಡಿಕೆಯಂತೆ ಮಳೆಯಾಗದೇ ನಮ್ಮ ಕಡೆ ಸಣ್ಣ ಪುಟ್ಟ ನದಿಗಳೂ ಬತ್ತಿ ಹೋಗಿವೆ. ನನ್ನ ಕ್ಷೇತ್ರ ಸಂಪೂರ್ಣವಾಗಿ ಮಲೆನಾಡ ಭಾಗದಲ್ಲಿ ಬಂದಿದ್ದರೂ ಕೂಡ...

ಅಧ್ಯಕ್ಷರು : ಆಯಿತು ಬಿಡಿ. ಅವರು ಉತ್ತರಿಸಲಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) : ಈಗ ಕುಡುಯುವ ನೀರಿನ ಬಗ್ಗೆ ಚರ್ಚೆಯಾಗುತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿಂದಂತೆ ಮಾನ್ಯ ಅನೇಕ ಶಾಸಕರು ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿಗೆ ತೀವ್ರ ಬರವಿದೆ ಎಂದು ತಮ್ಮ ಆತಂಕವನ್ನು ವ್ಯಕ್ತ ಮಾಡಿದ್ದಾರೆ. ಮಾನ್ಯ ಸದಸ್ಯರಾದ ದತ್ತರವರು ಹೇಳಿದ ಹಾಗೆ, ಇದು ಒಂದು ಕ್ಷೇತ್ರದ ಸಮಸ್ಯೆಯಲ್ಲ, ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ. ಕಳೆದ ಎರಡು ವರ್ಷಗಳಿಂದ ಮುಂಗಾರು ವಿಫಲವಾಗಿದೆ. ನಮ್ಮ ಹೊಸ ಸರ್ಕಾರ ಬಂದಮೇಲೆ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಈ ದಿಸೆಯಲ್ಲಿ ಮೇ 27 ಮತ್ತು 28 ರಂದು ಎರಡು ದಿನಗಳ ಕಾಲ ನಮ್ಮ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಪ್ರಾದೇಶಿಕ ಆಯುಕ್ತರು, ಎಲ್ಲಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜೊತೆಗೆ ಸಭೆಯನ್ನು ಮಾಡಿದರು. ರಾಜ್ಯದಲ್ಲಿರುವ ಭೀಕರ ಬರದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕುಡಿಯುವ ನೀರಿಗೆ ನಾವು ಹೆಚ್ಚಿನ ಆದ್ಯತೆ ಕೊಟ್ಟಿದ್ದೇವೆ. ನಾವು ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಪ್ರಾದೇಶಿಕ ಆಯುಕ್ತರುಗಳ ಜೊತೆಗೆ ಎರಡು ದಿನಗಳ ಕಾಲ ಸುದೀರ್ಘವಾಗಿ ಚರ್ಚೆ ಮಾಡಿದ್ದೇವೆ, ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಮುಖವಾಗಿ ಎರಡು ವಿಷಯಗಳನ್ನು ಪ್ರಸ್ತಾಪಿಸಿದರು. ಮೊದಲನೆಯದಾಗಿ, ಸಹಕಾರ ಸಂಸ್ಥೆಗಳಲ್ಲಿ ಬೀಜ ಮತ್ತು ಗೊಬ್ಬರದ ಬಗ್ಗೆ ರೈತರು ಸಾಲ ಮಾಡಿಕೊಂಡು ಸಂಕಷ್ಟದಲ್ಲಿದ್ದಾರೆ ಹೀಗಾಗಿ

ರೈತರ ನೆರವಿಗೆ ಸರಕಾರ ಬರಬೇಕೆಂದು ಸಂಬಂಧಪಟ್ಟ ಸಚಿವರ ಗಮನಕ್ಕೆ ಸೆಳೆದಿದ್ದಾರೆ. ಎರಡನೆಯದಾಗಿ, ಬಹಳಷ್ಟು ಬೋರ್‌ವೆಲ್‌ಗಳನ್ನು ಹಾಕಿಸಿದಿರಿ, ಆದರೆ, ಅವರಿಗೆ ಸರಿಯಾದ ರೀತಿಯಲ್ಲಿ ಹಣ ಪಾವತಿಯಾಗಿಲ್ಲವೆಂದು ಹೇಳಿದರು. ಕೊಟ್ಟಿದ್ದೇವೆ. ಹಣವನ್ನೂ ಕೂಡ ಬಿಡುಗಡೆ ಮಾಡಿ ಯಾರಿಗೆ ಬಾಕಿ ಇದೆ ಅವರಿಗೆ ಕೊಟ್ಟು ಉಳಿದಂಥ ಹಣವನ್ನು ತಕ್ಷಣದಲ್ಲಿ ನಾವು ಕೊಡುತ್ತೇವೆ. ಬಾಕಿ ಇರುವವರಿಗೆ ಹಣ ಕೊಡಬೇಕೆಂದು ಈಗಾಗಲೇ ನಾವು ಸ್ಪಷ್ಟವಾದ ನಿರ್ದೇಶನ ಕೊಟ್ಟಿದ್ದೇವೆ. ತಮಗೆ ಗೊತ್ತಿರುವ ಹಾಗೆ ಈ ಬರ ಪರಿಸ್ಥಿತಿಯ ಹಿನ್ನೆಡೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಇಬ್ಬರದೂ ಜವಾಬ್ದಾರಿಯಿದೆ. NDRF ನಿಂದ 75% ರಷ್ಟು SDRF ನಿಂದ 25% ರಷ್ಟು ಕೊಡುತ್ತೇವೆ. ಇದರಲ್ಲಿ ಇಲ್ಲಿಯವರೆಗೆ ಸುಮಾರು 1,221.36 ಕೋಟಿ ರೂಪಾಯಿಗಳು ಬಂದಿವೆ. ಇದರಲ್ಲಿ ಬ್ರೇಕ್ ಅಪ್ ಮಾಡಿ ಹೇಳುವುದಾದರೆ, ತುರ್ತು ಕುಡಿಯುವ ನೀರಿಗೆ, ಜಾನುವಾರು ಸಂರಕ್ಷಣೆಗೆ ಸುಮಾರು 1043 ಕೋಟಿ ರೂಪಾಯಿಗಳು ಖರ್ಚು ಮಾಡಿದ್ದೇವೆ. ನಮ್ಮ ಮಾನ್ಯ ಶಿವಲಿಂಗೇಗೌಡರು ಮಾತನಾಡುವಾಗ, ಕೇಂದ್ರ ಸರ್ಕಾರದ ಹಣ ಏನಿದೆ, ನಾವು ಆ ಹಣದಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಆಗುವುದಿಲ್ಲ, ಅದರಲ್ಲಿ ಲೈನ್ ಎಳೆಯಬಹುದು. ಅಥವಾ ವಿದ್ಯುತ್ ಸಂಪರ್ಕವನ್ನು ಕೊಡಬಹುದೇ ಹೊರತು ಬೋರ್‌ವೆಲ್ ಹಾಕಿಸುವುದಕ್ಕೆ ಆ ಹಣ ಬರುವುದಿಲ್ಲ. ಎಂದು ತುಂಬಾ ಚೆನ್ನಾಗಿ ಹೇಳಿದರು. ಇದರ ಜೊತೆಗೆ RDPRಗೆ ಬೋರ್‌ವೆಲ್‌ಗಳನ್ನು ಹಾಕಿಸುವುದಕ್ಕೋಸ್ಕರ ಸುಮಾರು 138 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ತಾವು ಹೇಳಿದ್ದು ಅರ್ಥ ಆಗಿದೆ. ಏಕೆಂದರೆ ಕೇಂದ್ರ ಸರ್ಕಾರ ನೇರವಾಗಿ ಹಣ ಕೊಡುವುದಿಲ್ಲ. Finance Commission ಮಾಡಿ ಅವರು ಏನು ಹಣ ಕೊಡುತ್ತಾರೆ, ಎಷ್ಟು ಹಣ ಕೊಡುತ್ತಾರೆ, ಯಾವ ಯಾವ ಭಾಗಕ್ಕೆ ಹಾಗೂ ಯಾವ ಬಾಬ್ತಿಗೆ ಖರ್ಚು ಮಾಡಬೇಕು ಎಂಬುದು ಬಹಳ ಸ್ಪಷ್ಟವಾಗಿದೆ.

Urban area ಗೆ ಕೂಡ ಸುಮಾರು 65 ಕೋಟಿ ರೂಪಾಯಿಗಳನ್ನು Urban Development Ministryಗೆ ಕೊಟ್ಟಿದ್ದೇವೆ.ನೀರಿಗೆ ಯಾವುದೇ ತೊಂದರೆ ಆಗಬಾರದು ಎನ್ನುವಂಥಹ ರೀತಿಯಲ್ಲಿ ನಾವು ಸಾಕಷ್ಟು ಹಣವನ್ನು ಈಗಾಗಲೇ ಕೊಟ್ಟಿದ್ದೇವೆ. ಮತ್ತೆ ವಿಶೇಷವಾಗಿ ಯಾವುದೇ ಜಾನುವಾರುಗಳಿಗೆ ತೊಂದರೆಯಾಗಬಾರದೆಂದು ಇಡೀ ರಾಜ್ಯದಲ್ಲಿ 224 ಗೋಶಾಲೆಗಳನ್ನು

ತೆರೆದಿದ್ದೇವೆ. ಮತ್ತೆ ಮಳೆ ಬರುವವರೆಗೂ ಯಾವುದೇ ಗೋಶಾಲೆಗಳನ್ನು ಮುಚ್ಚಬಾರದು, ಜಾನುವಾರುಗಳಿಗೆ ತೊಂದರೆ ಆಗಬಾರದು ಎನ್ನುವುದನ್ನು ಈಗಾಗಲೇ ನಾವುಸ್ಪಷ್ಟವಾಗಿ ಹೇಳಿದ್ದೇವೆ. ಕೇಂದ್ರ ಸರ್ಕಾರದಿಂದ ಈಗಾಗಲೇ ಸುಮಾರು 883 ಕೋಟಿ ರೂಪಾಯಿಗಳು ನಮಗೆ ಬಂದಿದೆ. State Government ಕೂಡ ಸುಮಾರು 160 ಕೋಟಿ ರೂಪಾಯಿಗಳನ್ನು, ವಿಶೇಷವಾಗಿ ಈ ಬರದ ಪರಿಸ್ಥಿತಿಯಲ್ಲಿ, ಈಗಾಗಲೇ ಹಣವನ್ನು ಖರ್ಚು ಮಾಡಿದ್ದೇವೆ. ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ ಇದರ ಬಗ್ಗೆ ಬಹಳ ಸ್ಪಷ್ಟವಾಗಿ ಸುದೀರ್ಘವಾಗಿ ಜಿಲ್ಲಾವಾರು ಚರ್ಚೆ ಮಾಡಿ, ಕುಡಿಯುವ ನೀರಿಗೆ ಯಾವುದೇ ಕಾರಣಕ್ಕೂ ತೊಂದರೆ ಆಗಬಾರದೆಂದು ಬಹಳ ಸ್ಪಷ್ಟವಾಗಿ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ನಮ್ಮ ಬಾಲಕೃಷ್ಣರವರು ಕುಡಿಯುವ ನೀರಿಗೆ ಹಣ ಇಲ್ಲವೆಂದು ಹೇಳಿದರು. ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ತಮ್ಮ ಜಿಲ್ಲೆಯಲ್ಲೂ ಕೂಡ ತಾವು ನೋಡಬಹುದು. ಪ್ರತಿಯೊಬ್ಬ ಪಿ.ಡಿ.ಅಕ್ವೆಂಟ್‌ನಲ್ಲಿ ಸಾಕಷ್ಟು ಹಣವನ್ನು ಕುಡಿಯುವ ನೀರಿಗೆ ಬಳಸಲು ನೀಡಿದ್ದೇವೆ. ಈಗಲೂ ಕೂಡ ಸಾಕಷ್ಟು ಹಣವಿದೆ, ಇದನ್ನು ಅವರು ಕುಡಿಯುವ ನೀರಿನ ಸಲುವಾಗಿ ಬಳಸಬಹುದಾಗಿದೆ. ಇದರ ಜೊತೆಗೆ ಗ್ರಾಮೀಣಾಭಿವೃದ್ಧಿ ಮತ್ತು ನಗರಾಭೀವೃದ್ಧಿ ಇಲಾಖೆಗಳಿಗೆ ಹಣ ಬಿಡುಗಡೆ ಮಾಡಿದ್ದೇವೆ. ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆಯಾಗದ ರೀತಿ ಎಲ್ಲಾ ವ್ಯವಸ್ಥೆ ಮಾಡಿದ್ದೇವೆ. ತಾವು ಹೇಳಿದ ಹಾಗೆ ಚುನಾವಣೆಯ ಸಮಯದಲ್ಲಿ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ ಈ ಟಾಸ್ಕ್ ಫೋರ್ಸ್ ಸ್ಥಗಿತವಾಗಿತ್ತು. ಮೊದಲು ಎ.ಸಿ.ಯವರಿಗೆ ಕೊಟ್ಟಿದ್ದನ್ನು ನಾವು ಈಗ ತಾಲ್ಲೂಕಿನಲ್ಲಿರುವ ತಹಸೀಲ್ದಾರ್‌ರವರಿಗೆ ಕೊಟ್ಟಿದ್ದೇವೆ. ತಾವು ಅದಕ್ಕೆ ಅಧ್ಯಕ್ಷರಾಗಿರುವುದರಿಂದ ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಿಕೊಳ್ಳಬಹುದು, ಏಕೆಂದರೆ ಪಿ.ಡಿ.ಅಕೌಂಟ್‌ನಲ್ಲಿ ಹಣವಿದೆ. ಜಿಲ್ಲಾಧಿಕಾರಿಗಳಿಗೆ ಸಾಕಷ್ಟು ಹಣ ಬಿಡುಗಡೆ ಮಾಡಿದ್ದೇವೆ. ಆದ್ದರಿಂದ, ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆಯಾಗಬಾರದೆಂದು, ಸರ್ಕಾರ ಬಂದು ಒಂದು ತಿಂಗಳಲ್ಲಿ ನಾವು ಇದಕ್ಕೆ ಹೆಚ್ಚು ಆದ್ಯತೆ ಕೊಟ್ಟಿದ್ದೇವೆ. ಬೋರ್ ಕೊರೆದಿರುವವರಿಗೆ ಯಾವುದೇ ಬಾಕಿ ಇರಬಾರದು, ಬಾಕಿ ಇರುವ ಹಣವನ್ನೂ ಕೂಡ ಕ್ಲಿಯರ್ ಮಾಡಿ ಸಂಪೂರ್ಣವಾಗಿ ಅವರಿಗೆ ಹಣ ಕೊಡಬೇಕು. ಇನ್ನೇನಾದರೂ ಬಾಕಿ ಇದ್ದರೆ

ಸರ್ಕಾರದಿಂದ ತಕ್ಷಣ ಅದನ್ನು ಬಿಡುಗಡೆ ಮಾಡುತ್ತೇವೆ. ಯಾವುದೇ ಕಾರಣಕ್ಕೂ ಬಾಕಿ ಇಟ್ಟುಕೊಳ್ಳಬಾರದು, ಮತ್ತೆ ಈಗ ಇರುವುದಕ್ಕೆ ಯಾವುದೇ ರೀತಿಯಿಂದಲೂ ಕೊರತೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕಾಗುತ್ತದೆ. ಇಂದೇನು ನಿಯಮ 69ರ ಅಡಿಯಲ್ಲಿ ವಿಶೇಷವಾಗಿ ಕುಡಿಯುವ ನೀರಿಗಾಗಿ ಮಾತ್ರ ತಾವು ಪ್ರಸ್ತಾಪ ಮಾಡುತ್ತಿದ್ದೀರಿ, ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ತೊಂದರೆಯಾಗಬಾರದು. ಕಳೆದ ಎರಡು ವರ್ಷಗಳಲ್ಲಿ ಮುಂಗಾರು ವಿಫಲಾವಾಗಿದ್ದರಿಂದ ಕುಡಿಯುವ ನೀರಿಗೆ ಬಹಳ ಹಾಹಾಕಾರ ಇದೆ ಎಂದು ತಿಳಿದು ಕುಡಿಯುವ ನೀರಿಗೆ ಸಂಬಂಧಪಟ್ಟಂಥ ಕೆಲಸಗಳನ್ನು ಆದ್ಯತೆ ಮೆರೆಗೆ ತೆಗೆದುಕೊಳ್ಳಲು ಸರ್ಕಾರ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಸಿ.ಇ.ಓ. ರವರೆಲ್ಲರನ್ನೂ ಕರೆಸಿ ಅವರಿಗೆ ಯಾವ ರೀತಿಯಾದ ಸಹಕಾರ ಸರ್ಕಾರದಿಂದ ಬೇಕಾಗಿದೆಯೋ ಅದನ್ನು ಪಡೆದುಕೊಂಡು ಸ್ವಲ್ಪವೂ ತೊಂದರೆ ಆಗದ ಹಾಗೆ ಇದರ ಬಗ್ಗೆ ವಿಶೇಷವಾದಂಥ ಗಮನವನ್ನು ಕೊಟ್ಟು ಈ ಜನರಿಗೆ ಇರತಕ್ಕಂಥ ಕುಡಿಯುವ ನೀರಿನ ಬವಣೆ ನೀಗಿಸಬೇಕೆಂಬ ದೃಷ್ಟಿಯಲ್ಲಿ ಈಗಾಗಲೇ ಚರ್ಚೆ ಮಾಡಿದ್ದೇವೆ. ಇದರ ಬಗ್ಗೆ ನಮಗೆ concern ಇದೆ ಎಂದು ತಾವು ಹೇಳಿದ್ದೀರಿ. ತಾವು ಹೇಳಿದ ಹಾಗೆ we are also more concerned ಇವತ್ತಿನ ದಿವಸ ಬರ ಮತ್ತು ಕುಡಿಯುವ ನೀರಿನ ಬಗ್ಗೆ ಹೆಚ್ಚಿನ ಕಾಳಜಿಯನ್ನು ನಾವು ಹೊಂದಿದ್ದೇವೆ. ಕೆಲವು ವಿಚಾರಗಳ ಬಗ್ಗೆ ತಾವು ಮಾತನಾಡತಕ್ಕಂಥ ಸಂದರ್ಭದಲ್ಲಿ ನನ್ನ ಗಮನವನ್ನು ಸೆಳೆದಿದ್ದೀರಿ. ಸಂಬಂಧಪಟ್ಟ ಅಧಿಕಾರಿಗಳಿಗೆ ಅದರ ಬಗ್ಗೆ ಖಂಡಿತ ಕ್ರಮ ತೆಗೆದುಕೊಳ್ಳುವುದಕ್ಕೆ ತಿಳಿಸುತ್ತೇನೆ. ತಾವು ಟಾಸ್ಕ್‌ಫೋರ್ಸ್ ಅಧ್ಯಕ್ಷರಾಗಿರುವುದರಿಂದ ತಾವು ಕೂಡ ಮಾತನಾಡ ಬಹುದು. ಹಾಗೆಯೇ, ನಿಮ್ಮ ಜಿಲ್ಲೆಗಳಿಗೆ ನಾನು ಕೊಟ್ಟಿರುವ ಮಾಹಿತಿಗಳನ್ನು ತಾವು ಅಲ್ಲಿ ತಿಳಿದುಕೊಳ್ಳಬಹುದು. ಸರ್ಕಾರದ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಮತ್ತೆ ಆದೇಶ ಕೊಟ್ಟ ಅದರ ಬಗ್ಗೆ ಜ್ಞಾಪಿಸಿ ಯಾವುದೇ ಕಾರಣಕ್ಕೂ ತೊಂದರೆ ಆಗದಂತೆ ನೋಡಿಕೊಳ್ಳಬೇಕೆಂದು ಸೂಚನೆ ಕೊಡುತೇನೆ. ಕುಡಿಯುವ ನೀರಿಗೆ ಎಲ್ಲಿಯಾದರೂ ತೊಂದರೆ ಬಂದರೆ ಅದನ್ನು ನಾವು ಬಹಳ ತೀವ್ರವಾಗಿ ಪರಿಗಣಿಸುತ್ತೇವೆಂದು ಎರಡು ದಿನ ನಡೆದಂಥ ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಎಚ್ಚರಿಕೆಯನ್ನೂ ಸಹ ಕೊಟ್ಟಿದ್ದಾರೆ. ಆದ್ದರಿಂದ,

ಇವತ್ತು ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಪ್ರಸ್ತಾಪ ಮಾಡಿ ಈ ಸದನದ ಮುಖಾಂತರ ನಮ್ಮ ಗಮನವನ್ನು ಸೆಳೆದಿದ್ದೀರಿ. ಇದರ ಬಗ್ಗೆ ನಾವು ಇನ್ನೂ ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಿಯಾವುದೇ ರೀತಿಯಲ್ಲಿ ತೊಂದರೆ ಆಗದ ಹಾಗೆ ನಿಮ್ಮ ಜೊತೆ ಸಹಕರಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು :– ಮಾನ್ಯ ಸಚಿವರೆ, ತಾವು ಸರ್ಕಾರಕ್ಕೆ ಇರತಕ್ಕಂಥ ಕಳಕಳಿ ಬಗ್ಗೆ ಹೇಳಿದೀರಿ. ಇದನ್ನು ನಾನೂ ಸಹ ಒಪ್ಪುತ್ತೇನೆ. ಜಿಲ್ಲಾ ಮಟ್ಟದಲ್ಲಿರುವ ನಿಮ್ಮ ಅಧಿಕಾರಿಗಳು ನಿಮ್ಮ ನಿರೀಕ್ಷಣೆ ಪ್ರಕಾರ ಇಲ್ಲ. ಈ ಮಾತನ್ನು ಏತಕೆ ಹೇಳುತ್ತಿದ್ದೇನೆಂದರೆ, ಶಿವಮೊಗ್ಗ ಜಿಲ್ಲೆಗೆ 25 ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಆದರೆ, ಇವತ್ತಿನವರೆಗೆ ಕೇವಲ 3 ಕೋಟಿ ರೂಪಾಯಿ ಮಾತ್ರ ಖರ್ಚಾಗಿದೆ. ನೀರನ್ನು ಸರಬರಾಜು ಮಾಡಿರುವವರಿಗೆ ಇವತ್ತಿನವರೆಗೆ ದುಡ್ಡು ಕೊಟ್ಟಿಲ್ಲ. ಆದ್ದರಿಂದ, ಅಧಿಕಾರಿಗಳ ಮೇಲೆ ಸ್ವಲ್ಪ ಜಾಟಿ ಏಟನ್ನು ಬೀಸಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಮೊನ್ನೆ ನಡೆದಂಥ ಸಮ್ಮೇಳನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಆದೇಶವನ್ನು ಕೊಟ್ಟಿದ್ದಾರೆ. ಸರ್ಕಾರ ಕೊಟ್ಟಂಥ ಆದೇಶವನ್ನು ಯಾವುದಾದರೂ ಜಿಲ್ಲಾಧಿಕಾರಿಗಳು ಸರಿಯಾಗಿ ಪಾಲಿಸದೆ ಇದ್ದಲ್ಲಿ ಅವರ ಮೇಲೆ ವಿಚಾರಣೆ ಮಾಡಿ ಸೂಕ್ತ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್ :– ಎಷ್ಟು ಹಣ ಬಿಡುಗಡೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಲಿಲ್ಲ.

ಅಧ್ಯಕ್ಷರು : ಮಂತ್ರಿಗಳು ಹೇಳುತ್ತಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳೆ, ತಾವು ಹೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ ದಿನಾಂಕ 1–08–2011 ರಿಂದ ದಿನಾಂಕ 25–07–2012ರ ಅವಧಿಯಲ್ಲಿ ಪಡೆದಂಥ ಕೃಷಿ ಅಲ್ಪಾವಧಿ ಸಾಲದ ಪೈಕಿ 25,000 ರೂಪಾಯಿ ಮತ್ತು ಅದರ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗಿದೆ.

ಅಧ್ಯಕ್ಷರು :– ಮಾನ್ಯ ಮಂತ್ರಿಗಳೆ, ಮೊದಲಿಗೆ ಕುಡಿಯುವ ನೀರಿನ ವಿಷಯ ಪೂರೈಸೋಣ. ಆನಂತರ ಈ ಬಗ್ಗೆ ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ :– ಈ ವಿಷಯವನ್ನೂ ಸಹ ಕೇಳಿದ್ದರು.

ಶ್ರೀ ವೈ.ಎಸ್.ವಿ ದತ್ತ :– ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಕೊಟ್ಟಂಥ ಉತ್ತರ, ಇದರ ಬಗ್ಗೆ ಇಟ್ಟಿರುವ ಕಾಳಜಿ ಬಗ್ಗೆ ನಮ್ಮ ಪ್ರಶ್ನೆ ಇಲ್ಲ. ಹಣದ ಬಗ್ಗೆ ಏನೂ ಯೋಚನೆ ಮಾಡಬೇಡಿ. ಈ ಬಗ್ಗೆ ಡೆಪ್ಯುಟಿ ಕಮಿಷನರ್‌ರವರಿಗೆ ಹೇಳಿದ್ದೇವೆ. ಪಿ.ಡಿ. ಅಕೌಂಟ್‌ನಲ್ಲಿ ಹಣ ತುಂಬಿ ತುಳುಕಾಡುತ್ತಿದೆ ಆದ್ದರಿಂದ, ಎಷ್ಟು ಬೇಕಾದರೂ ಕೊಡುತ್ತಾರೆಂದು ಅವರು ಹೇಳಿದರು. ಆದರೆ, ಸರ್ಕಾರ ಮತ್ತು ಅದರಲ್ಲಿಯೂ ಮುಖ್ಯವಾಗಿ ಕಂದಾಯ ಇಲಾಖೆಯ ಮಂತ್ರಿಗಳಿಗೆ ಅಚ್ಚರಿ ಮತ್ತು ಆಘಾತವಾಗುವ ಒಂದು ಸುದ್ದಿಯನ್ನು ಕೊಡುತ್ತೇನೆ. ಅದೇನೆಂದರೆ, ದೀಪದ ಕೆಳಗಡೆ ಕತ್ತಲು ಇರುತ್ತದೆ. ಮೊನ್ನೆದಿವಸ ಕಂದಾಯ ಇಲಾಖೆ ಮಂತ್ರಿಗಳ ನೇರ ಉಸ್ತುವಾರಿಗೆ ಬರುವಂಥ ಕಡೂರು ತಹಸೀಲ್ದಾರ್ ಕಛೇರಿಯಲ್ಲಿ ನಾಲ್ಕು ದಿನಗಳಿಂದ ಕರೆಂಟ್ ಇಲ್ಲ.

ಅಧ್ಯಕ್ಷರು :– No, No, Please ಈ ವಿಷಯ ಬರುವುದಿಲ್ಲ.

ಶ್ರೀ ವೈ.ಎಸ್.ವಿ ದತ್ತ :– ಕಡೂರು ತಹಸೀಲ್ದಾರ್ ಕಛೇರಿಯಲ್ಲಿ ದುಡ್ಡು ಇಲ್ಲದೇ 40 ಸಾವಿರ ರೂಪಾಯಿ ವಿದ್ಯುತ್ ಬಿಲ್ ಕಟ್ಟದೇ ಇರುವುದರಿಂದ ವಿದ್ಯುತ್ ಸರಬರಾಜನ್ನು ಕಟ್ ಮಾಡಿದ್ದಾರೆ. ಹಾಗೆಯೇ ಕಡೂರು ತಹಸೀಲ್ದಾರ್ ಕಛೇರಿಲ್ಲಿ ಟೆಲಿಫೋನ್ ಬಿಲ್ ಕಟ್ಟದೆ ಇರುವುದರಿಂದ ಅದೂ ಸಹ disconnect ಆಗಿದೆ. ತಹಸೀಲ್ದಾರ್‌ರವರು ಕಂಗಾಲಾಗಿ ಭೂಮಿ ಫಂಡ್‌ನಿಂದ 40 ಸಾವಿರ ರೂಪಾಯಿ ತೆಗೆದು ಕಟ್ಟಿದ್ದಾರೆ...

ಅಧ್ಯಕ್ಷರು :– Ok, Ok,ಕುಡಿಯುವ ನೀರಿಗೆ ದುಡ್ಡಿಲ್ಲವೆಂದು ತಾವು ಹೇಳಿದರೆ ಸಾಕು.

ಶ್ರೀ ವೈ.ಎಸ್.ವಿ ದತ್ತ :– ಇದಕ್ಕೇ ದುಡ್ಡಿಲ್ಲವೆಂದೆ ಮೇಲೆ ಅದಕ್ಕೆ ಎಲ್ಲಿಂದ ತರುತ್ತಾರೆ? ಕೇವಲ 40 ಸಾವಿರ ರೂಪಾಯಿ ಕೊಡುವುದಕ್ಕೆ ಆಗಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ಲಾರಿಫಿಕೇಷನ್ ಇದೆ. ಸನ್ಮಾನ್ಯ ಸಚಿವರು ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದಾರೆ. ಹಾಗೆಯೇ 138 ಕೋಟಿ ರೂಪಾಯಿ ಕೊಟ್ಟಿದ್ದೇವೆಂದೂ ಸಹ ಹೇಳಿದ್ದಾರೆ. ನಮ್ಮ ತಾಲ್ಲೂಕಿಗೆ 30 ಲಕ್ಷ ರೂಪಾಯಿ ಮಾತ್ರ ಬಂದಿದೆ. 30 ಲಕ್ಷ ರೂಪಾಯಿಯಂತೆ ಲೆಕ್ಕ ಹಾಕಿದರೆ ಎಷ್ಟು ದುಡ್ಡು ಆಗುತ್ತದೆ? ನಮ್ಮ ಜಿಲ್ಲೆಗೆ ದುಡ್ಡು ಬಂದಿದೆ? ಇದರಲ್ಲಿ ಎಷ್ಟು ಬಿಡುಗಡೆಯಾಗಿದೆ? ಹಾಗೆಯೇ, ತೀವ್ರತರವಾದ ಬರಗಾಲಕ್ಕೆ

ತುತ್ತಾಗಿರುವ ತಾಲ್ಲೂಕುಗಳು ಯಾವುವು? ನಾವು ನದಿಯನ್ನು ನೋಡದೆ ಇರುವವರು. ನಮ್ಮಲ್ಲಿ ಅಂತರ್ಜಲ ಒಂದು ಸಾವಿರ ಅಡಿ ಕೆಳಕ್ಕೆ ಹೋಗಿದೆ.

ಅಧ್ಯಕ್ಷರು :– ಮಾನ್ಯ ಶಿವಲಿಂಗೇಗೌಡರೆ, ಒಂದು ನಿಮಿಷ, ನಿಮಗೆ ಸಹಾಯ ಮಾಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಎಲ್ಲ ವಿಷಯವನ್ನೂ ಇಲ್ಲಿಯೇ ಪ್ರಸ್ತಾಪ ಮಾಡಬೇಕು. ನಾವು ಜಿಲ್ಲಾಧಿಕಾರಿ ಹತ್ತಿರ ಹೋಗ ಹೊಡೆದಾಡುವುದಕ್ಕೆ ಆಗುತ್ತದೆಯೇ? ನಾವು ಇಲ್ಲಿ ಮಾನ್ಯ ಮಿನಿಸ್ಟರ್‌ರವರ ಹತ್ತಿರ ಹೋಗಿ ಹೊಡೆದಾಡುವುದಕ್ಕೆ ಆಗುತ್ತದೆಯೇ? ನಾವು ಇಲ್ಲಿ ಮಾನ್ಯ ಮಿನಿಸ್ಟರ್‌ರವರು ಹತ್ತಿರವೇ ಹೊಡೆದಾಡಬೇಕು.

ಅಧ್ಯಕ್ಷರು :– ನಿಮಗೆ ಸಹಾಯ ಮಾಡುತ್ತೇನೆ

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ :– 30 ಲಕ್ಷ ರೂಪಾಯಿ ಕೊಟ್ಟಿರುವುದು ಸಾಕಾಗುವುದಿಲ್ಲ. ತೀವ್ರವಾದಂಥ ಬರಗಾಲ ಇದೆ.

ಅಧ್ಯಕ್ಷರು :– ನಿಮಗೆ ಕೊಟ್ಟಿರುವ ದುಡ್ಡು ಖರ್ಚಾಗಿದ್ದರೆ ಇನ್ನು ಹೆಚ್ಚು ಹಣ ಬೇಕೆಂದು ಕೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಎಷ್ಟು ಬೇಕೆಂಬುದು ಜಿಲ್ಲಾಧಿಕಾರಿಗಳು ಮಾಹಿತಿ ಕೊಟ್ಟಿರುತ್ತಾರೆ. ನನ್ನ ಕ್ಷೇತ್ರ ಬಹಳ ಬರಗಾಲಕ್ಕೆ ತುತ್ತಾಗಿದೆ. ಆದ್ದರಿಂದ, ಬೋರ್‌ವೆಲ್ ಕೊರೆಸುವುದಕ್ಕೆ ನಮಗೆ ಒಂದು ಕೋಟಿ ರೂಪಾಯಿಯಾದರೂ ಬೇಕಾಗುತ್ತದೆ. ಹಾಗೇಯೇ ಅದನ್ನು ನಿರ್ವಹಣೆ ಮಾಡುವುದಕ್ಕೆ ದುಡ್ಡು ಬೇಕಾಗುತ್ತದೆ. ಆದ್ದರಿಂದ, ದಯವಿಟ್ಟು ಅಷ್ಟು ಹಣವನ್ನು ಕೊಡಿಸಿಕೊಡಿ.

ಅಧ್ಯಕ್ಷರು :– ಆ ರೀತಿ ಕೇಳಿ ಅಷ್ಟೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ :– ಕುಡಿಯುವ ನೀರಿಗೆ ಯಾವುದೇ ಕಾರಣಕ್ಕೂ ತೊಂದರೆಯಾಗದಂತೆ ಸರ್ಕಾರದಿಂದ ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ನನ್ನ ಕ್ಷೇತ್ರ ಹೆಚ್ಚು ಬರಗಾಲದಿಂದ ಕೂಡಿದೆ. ಒಂದು ತಾಲ್ಲೂಕಿಗೆ 30 ಲಕ್ಷ ಕೊಟ್ಟರೆ ಸಾಕಾಗುವುದಿಲ್ಲ. ನನ್ನ ತಾಲ್ಲೂಕು ಮತ್ತು ಅರಸೀಕೆರೆ ತಾಲ್ಲೂಕಿಗೆ 30 ಲಕ್ಷ ರೂಪಾಯಿ ಕೊಟ್ಟಿದ್ದಾರೆ.

ಅಧ್ಯಕ್ಷರು :– ನಿಮಗೆ ಏನು ಬೇಕೆಂದು ಕೇಳಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :– ಮಳೆ ಬರುವುದೇ ಬೇರೆ ಮತ್ತುunderground water ಸಿಗುವುದೇ ಬೇರೆಯಾಗಿದೆ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

(ಗೊಂದಲ)

ಅಧ್ಯಕ್ಷರು :– ಈಗಿರುವ ಪರಿಸ್ಥಿತಿಯನ್ನು ನಿಭಾಯಿಸಬೇಕಾದರೆ ಇನ್ನೂ ಎಷ್ಟು ಹಣ ಬೇಕಾಗುತ್ತದೆ ಎಂಬ ಬಗ್ಗೆ ಕೇಳಿ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಹಲವಾರು ವಿಚಾರಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಕಂದಾಯ ಸಚಿವರು ಸಮಾಧಾನಕರವಾದಂಥ ಮತ್ತು ವಿವರವಾದಂಥ ಉತ್ತರ ಕೊಟ್ಟಿದ್ದಾರೆ. ಕೆಲವು ವಿಚಾರಗಳು ನನ್ನ ಇಲಾಖೆಗೆ ಸಂಬಂಧಪಡುತ್ತದೆ. ಸರ್ಕಾರದಿಂದ ಇತ್ತೀಚೆಗೆ ಹೋಗಿರತಕ್ಕಂಥ ಸುತ್ತೋಲೆಗಳಿಂದ ಆಗಿರುವಂಥ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. 13th Finance ಬಗ್ಗೆ ತಾವು ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ನಂತರ ಬರುತ್ತೇನೆ. ಕುಡಿಯುವ ನೀರಿಗಾಗಿ ಸದ್ಯಕ್ಕೆ ಹಣದ ತೊಂದರೆ ಇಲ್ಲ. ಕುಡಿಯುವ ನೀರಿನ ಸಮಸ್ಯೆಯ ಪರಿಹಾರಕ್ಕಾಗಿ ಏನೇ ಕೆಲಸ ತೆಗೆದುಕೊಳ್ಳಬೇಕಾದರೂ ಅದಕ್ಕೆ ಯಾವುದೇ ರೀತಿಯ ಹಣದ ತೊಂದರೆ ಇಲ್ಲ. ಆದರೆ, ಒಂದು ಕೊರತೆ ಇತ್ತು. ಅದೇನಂದರೆ, ಬೋರ್‌ವೆಲ್‌ಗೆ ಹಣ ಲಭ್ಯ ಇರಲಿಲ್ಲ. CRFನಲ್ಲಿ ಸಾಕಷ್ಟು ಹಣ ಡಿ.ಸಿ. ಯವರ ಹತ್ತಿರ ಲಭ್ಯ ಇದೆ. ಆದರೆ, ಟಾಸ್ಕ್‌ಫೋರ್ಸ್‌ನ ಅಧ್ಯಕ್ಷರಾಗಿರುವ ಮಾನ್ಯ ಶಾಸಕರು ಬೋರ್‌ವೆಲ್ ಹಾಕಿ ಎಂದು ಹೇಳಿದರೆ ಬೋರ್‌ವೆಲ್ ಹಾಕುವುದಕ್ಕೆ ಹಣದ ಕೊರತೆ ಇತ್ತು. ಏಕೆಂದರೆ, CRF ನಲ್ಲಿ ಹೊಸ ಬೋರ್‌ವೆಲ್ ಕೊರೆಯುವುದಕ್ಕೆ ನಿರ್ಬಂಧ ಹೇರಿದ್ದಾರೆ. ಈ ಒಂದು ಕಾರಣದಿಂದ ನಾವು ಇಲಾಖೆಯ ಮೂಲಕ ಪ್ರತಿಯೊಂದು ZP Sub-Divisionಗೆ 1 ಕೋಟಿ ರೂಪಾಯಿಯನ್ನು ಬೋರ್‌ವೆಲ್ ಕೊರೆಯುವುದಕ್ಕೆ ಹಾಗೂCRF ಅಡಿಯಲ್ಲಿ ಕುಡಿಯುವ ನೀರಿನ ಕೆಲಸ ಮಾಡುವುದಕ್ಕೆ ಯಾವುದನ್ನು ನಿರ್ಬಧಿಸಿದ್ದಾರೆಯೋ ಅದು ಅಲ್ಲಿ ಅನಿವಾರ್ಯ, ಅಗತ್ಯತೆ ಇತ್ತೆಂದರೆ, ಅದನ್ನು ಬಹಳ ಮಾಡಿಕೊಳ್ಳುವುದಕ್ಕಾಗಿ 38 ಕೋಟಿ ರೂಪಾಯಿಗಳನ್ನು 25ನೇ ತಾರೀಖಿನ ದಿವಸ ನಾವು ಬಿಡುಗಡೆ ಮಾಡಿದ್ದೇವೆ. ಬಹುಶಃ ಅದು ತಮ್ಮ ಗಮನಕ್ಕೆ ಬಂದಿರುವುದಿಲ್ಲ. ಏಕೆಂದರೆ,

ತಾವು ಈ ಕಡೆ ಬಂದಿದ್ದೀರಿ, ಹಣ ಆ ಕಡೆ ಹೋಗಿದೆ. ನೀವು ಹೋಗಿದೆ. ನೀವು ಹೋಗಿ ಜಿಲ್ಲಾಧಿಕಾರಿಗಳ ಜೊತೆ ಮತ್ತು ಟಾಸ್ಕ್‌ಫೋರ್ಸ್ ಸಮಿತಿಯಲ್ಲಿ ಕುಳಿತು ರಿವ್ಯೂ ಮಾಡಿ. ಈಗ ಹಣ ಲಭ್ಯವಿದೆ. ಅಗತ್ಯತೆ ಎಲ್ಲೆಲ್ಲಿದೆ ಅಲ್ಲಿ ಆ ಹಣವನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬಹುದು. 13th Finance ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. O & M ಅನ್ನು 13th Finance ನಿಂದ ಬಂದಿರತಕ್ಕಂಥ ಹಣದಲ್ಲಿ ನೀವು ತೆಗೆದುಕೊಳ್ಳಬಾರದೆಂದು ನಿರ್ಬಂಧ ಮಡಿದ್ದೇವೆ. ಆದರೆ, ಈ ಬಗ್ಗೆ ಚರ್ಚೆ ಕೇಳಿದ ಮೇಲೆ ಹಾಗೂ ಬೇರೆ ಬೇರೆ ಮೂಲಗಳಿಂದ ಬಂದಿರತಕ್ಕಂಥ feedbackನ ಹಿನ್ನೆಲೆಯಲ್ಲಿ O & M ಅನ್ನು ನಾವು ನಿರ್ಬಂಧ ಮಾಡುವುದು ಸರಿಯಲ್ಲವೆಂಬುದು ನಮಗೆ ಮನವರಿಕೆಯಾಗಿದೆ. ಆದ್ದರಿಂದ, ನಾಳೆ, ನಾಡಿದ್ದು O & M ಅನ್ನು ನಿರ್ಬಂಧ ಮಾಡಿರತಕ್ಕಂಥದ್ದನ್ನು relax ಮಾಡಿ ತಕ್ಷಣ ಆ ಬಗ್ಗೆ ಆದೇಶವನ್ನು ಕಳುಹಿಸುತ್ತೇವೆ. ಸನ್ಮಾನ್ಯ ದತ್ತಾರವರು ಸಿ.ಎ.ಜಿ. ರಿಪೋರ್ಟ್ ಬಗ್ಗೆ ಪ್ರಸ್ತಾಪ ಮಾಡಿ ಮೂರು ವರ್ಷಗಳಿಂದ quality waterಗೆ ಸಾವಿರಾರು ಕೋಟಿ ಹಣ ಬಿಡುಗಡೆಯಾಗಿ ಅದಕ್ಕೆ ಅಲಾಟ್‌ಮೆಂಟ್ ಆದರೂ ಸಹ 10%–15% ಮಾತ್ರ ಖರ್ಚಾಗಿದೆ ಎಂಬ ವಿಷಯವನ್ನು ಸಹ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದರಿಂದ ನಮಗೂ ನೋವು ಆಗುತ್ತದೆ. ಅದಕ್ಕೆ ಇನ್ನು ಮುಂದೆ ಹಾಗೆ ಆಗದ ರೀತಿ ಮತ್ತು ಏಕೆ ಹೀಗೆ ಮಾಡಿದರು ಎನ್ನುವುದನ್ನು ತಿಳಿದುಕೊಳ್ಳುವಂಥ ಎಲ್ಲಾ ಪ್ರಯತ್ನ ಸರ್ಕಾರ ಮಾಡುತ್ತದೆ ಹಾಗೂ ಸೂಕ್ತ ಕ್ರಮ ಸರ್ಕಾರ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು : ಓಕೆ.

2. ವಿಷಯ : ಹಾಸನ ಮತ್ತು ಶಿವಮೊಗ್ಗ ಪಶು ವೈದ್ಯಕೀಯ ಕಾಲೇಜುಗಳು ಭಾರತೀಯ ಪಶು ವೈದ್ಯಕೀಯ ಪರಿಷತ್ತಿನಿಂದ ನೋಂದಣಿ ಆಗದಿರುವ ಪ್ರಯುಕ್ತ ವೈದ್ಯಕೀಯ ಅಭ್ಯರ್ಥಿಗಳಿಗೆ ಆಗಿರುವ ಅನಾನುಕೂಲತೆ ಬಗ್ಗೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರತಕ್ಕಂಥ ಶಿವಮೊಗ್ಗ ಮತ್ತು ಹಾಸನದ ಪಶು ವೈದ್ಯಕೀಯ ಕಾಲೇಜುಗಳಿಗೆ ಹೊಸದಾಗಿ ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಳ್ಳಬಾರದು ಎಂದು ಕೇಂದ್ರದ ಪಶು ವೈದ್ಯಕೀಯ ಸಂಸ್ಥೆಯಿಂದ